ಪ್ರಧಾನಾಮಾತ್ಯ

ಪಂಡಿತ ಜವಾಹರಲಾಲ ನೆಹರು



ಸಂಕ್ಷಿಪ್ತ ಜೀವನಚರಿತ್ರೆ.

ಬೆಲೆ: ಒಂದಾಣೆ. (ದ್ವಿತೀಯ ಮುದ್ರಣ) ಲೇಖಕ: ಕುಡ್ಪಿ ವಾಸುದೇವ ಶೆಣೈ.

ಒಂದಾಣೆಮಾಲೆ—ಮಂಗಳೂರು.

‘ಒಂದಾಣೆ ಮಾಲೆ’ಯ ಪ್ರಕಟಣೆಗಳು:

೧*ಕೆಪ್ಪಟಿರಾಯ; ೨ ನಾರೀಶ್ವರರು(ದ್ವಿ. ಮುದ್ರಣ); ೩ ಕಳ್ಳನಿಗೆ ಸಂಭಾವನೆ (ದ್ವಿ. ಮುದ್ರಣ) ೪ *ಸದ್ರಿಸುಬ್ಬ; ೫ ಅದ್ಭುತ ತ್ಯಾಗ (ದ್ವಿ. ಮುದ್ರಣ); ೬ *ಚುನಾವಣೆ ಅರ್ಥಾತ್ ಬನಾವಣೆ; ೭*ಬೀಡಿ ಸೇದಬೇಡಿ ಮತ್ತು ಆ ಮಗು; ೮* ಇಂಗ್ಲಿಷ್-ಕನ್ನಡ ಅರ್ಥಕೋಶ; ೯ ಲಂಚಕ್ಕೆ ಸಂಚಕಾರ (ದ್ವಿ. ಮುದ್ರಣ); ೧೦ *ಟಿಶ್ಯೂ ಔಷಧಿಗಳ ಕೈಪಿಡಿ; ೧೧ *ಶ್ರೀ ಕ್ಷೇತ್ರ ಧರ್ಮಸ್ಥಳ (ತೃ. ಮುದ್ರಣ); ೧೨ ಜೀವದ ಮೌಲ್ಯ ಮತ್ತು ಇತರ ಕಥೆಗಳು; ೧೩ ಸತ್ತವನ ಸೇಡು ಮತ್ತು ಇತರ ಕಥೆಗಳು; ೧೪ *ವೆಂಕಟನ ಸಂಕಟ; ೧೫ ಬಾಬಿಗೆ ಬಾಸಿಂಗ (ದ್ವಿ. ಮುದ್ರಣ); ೧೬ ವೇಣೂರಿನ ಗತವೈಭವ(ದ್ವಿ. ಮುದ್ರಣ); ೧೭ ಒಗಟುಗಳು (ದ್ವಿ. ಮುದ್ರಣ); ೧೮ ಜಗಳಗಂಟಿ ಮತ್ತು ಇತರ ಕಥೆಗಳು; ೧೯ ರಥೋತ್ಸವ; ೨೦ ಕರಿನಾಯಿ ಮತ್ತು ಮುಪ್ಪು; ೨೧ ಭಾರತದ ಮಹಾನಗರ-I(ದ್ವಿ. ಮುದ್ರಣ); ೨೨ ತಿರುಕ್ಕುರಲ್ (ದ್ವಿ. ಮುದ್ರಣ); ೨೩ ಸೂರ್ಯನ ಸಂಸಾರ; ೨೪ ಭಾರತದ ಮಹಾನಗರ-II (ದ್ವಿ. ಮುದ್ರಣ); ೨೫ ಧೈರ್ಯ ಮತ್ತು ಇತರ ಸತ್ಯಕಥೆಗಳು; ೨೬ ಮಾರಾವತಾರ(ದ್ವಿ. ಮುದ್ರಣ); ೨೭ ಹಾಸವಿಲಾಸ; ೨೮ ಸತ್ಯವಂತ ಬಾಬಿ [ದ್ವಿ. ಮುದ್ರಣ]; ೨೯ ಜಾಣ್ಮೆಯ ಒಗಟುಗಳು ೩೦ ಜಾತಕ ಕಥೆಗಳು; ೩೧ ಕಾರ್ಕಳದ ಚರಿತ್ರೆ; ೩೨ ಮಂಜರಿ; ೩೩ ದರ್ಶನದ ಕಥೆಗಳು; ೩೪ ಅಳುವಿನ ಹೊಳೆ ಮತ್ತು ಕೇಶವಭೂಪ; ೩೫ ಶರಾಬಿನ ಪೀಪಾಯಿಗಳು; ೩೬ ಉಪದೇಶ ಶತಕ; ೩೭ ನಿಮಗೆ ಗೊತ್ತಿದೆಯೇ?; ೩೮ ಚತುರ ಚಮತ್ಕಾರ; ೩೯ ಸತೀ ಸಾವಿತ್ರಿ (ದ್ವಿ. ಮುದ್ರಣ); ೪೦ ಆಭರಣಗಳ ಪೆಟ್ಟಿಗೆ ಮತ್ತು ಇತರ ಕಥೆಗಳು; ೪೧ ಭಾರತದ ಮಂತ್ರಿಮಂಡಲಗಳು(ದ್ವಿ. ಮುದ್ರಣ); ೪೨ ಕಾಲುಬಳೆಯ ಕಥೆ; ೪೩ ಭಾರತದ ನಾಲ್ಕು ಕಲಶಗಳು; ೪೪ ವ್ಯಸನದಿಂದ ಲಾಭ ಮತ್ತು ಇತರ ಕಥೆಗಳು; ೪೫ ಸುಭಾಷಿತ; ೪೬ ೧೮೫೭ರ ಸಿಪಾಯಿದಂಗೆ; ೪೭ ಆಕಾಂಡ ತಾಂಡವ; ೪೮ ಸಾಹಸದ ಕಥೆಗಳು; ೪೯ ಸಂಜ್ಞಾಜ್ಞಾನಕೋಶ; ೫೦ ಪಂಡಿತನ ಪಿಟೀಲು; ೫೧ ಭೋಗಯಾತ್ರೆ; ೫೨ ಸಂಗ್ರಾಮಸಿಂಹ; ೫೩ ಧರ್ಮಶಿಕ್ಷಾ; ೫೪ ಮಹಾತ್ಮ; ೫೫ ಮೀರಾಬಾಯಿ; ೫೬ ವೀರರಮಣಿ ಕರ್ಮದೇವಿ; ೫೭ ಅರಳಿದ ನಗು; ೫೮ ಸಚಿತ್ರ ಜಪಾನ್; ೫೯ ಚುಟ್ಟಬಿಟ್ಟ ಧಿಟ್ಟ; ೬೦ ನಿರಪರಾಧಿ; ೬೧ ಭಕ್ತವಾಣಿ; ೬೨ ಜಾನಪದ ಸಾಹಿತ್ಯ; ೬೩ ಡಾಕ್ಟರ್ ಆರೋಗ್ಯಮ್; ೬೪ ಲೌಕಿಕ ನ್ಯಾಯಗಳು; ೬೫ ಶಿಶುಪಾಲ ಮಾನಭಂಗ; ೬೬ ಜರಾಸಂಧ ವಧೆ; ೬೭ ಜವಾಹರಲಾಲ (ದ್ವಿ. ಮುದ್ರಣ); ೬೮ ಕರುಣೆ ಮತ್ತು ಇತರ ಕಥೆಗಳು; ೬೯ ಶ್ರೀಕ್ಷೇತ್ರ ಉಡುಪಿ; ೭೦ ವಿನೋದ ವಿಹಾರ; ೭೧ ಭಾರತದ ಗತವೈಭವ; ೭೨ ಸತ್ಯ ಹರಿಶ್ಚಂದ್ರ; ೭೩ ಸೂಕ್ತಿಗಳು; ೭೪ ಉ.ಕ.ದ ಯಕ್ಷಗಾನ ಕಲಾವಿದರು; ೭೫ ದೇವರ ಸಾಮ್ರಾಜ್ಯದಲ್ಲಿ...; ೭೬ ಕ್ರಾಂತಿಕಂಠೀರವ ಭಗತ್‌ಸಿಂಘ್; ೭೭ ಜಾತಕಪಠನ ಮತ್ತು ಇತರ ಕಥೆಗಳು; ೭೮ ಅಮೃತಪಾಣಿ; ೭೯ ಮಾಯಾಮೃಗ; ೮೦ ಡಾಕ್ಟರ್ ಗಾಂಧೀಜಿ; ೮೧ ಆದಿಶ್ರೀ ಶಂಕರಾಚಾರ್ಯರ ಜೀವನ ಚರಿತ್ರೆ; ೮೨ ಆದಿಶ್ರೀ ಶಂಕರಾಚಾರ್ಯ ವಿರಚಿತ ಸ್ತೋತ್ರಗಳು (ಅರ್ಥ ಸಹಿತ); ೮೩ ಬೆಡಗಿನ ನಾಡು ಕೊಡಗು; ೮೪ ಆಮೆಯ ಚಿಪ್ಪು ಮತ್ತು ಇತರ ಸತ್ಯಕಥೆಗಳು; ೮೫ ಮಂಗಳೂರಿಂದ ಮಧುರೆಗೆ; ೮೬ ಸತೀ ವೃಂದಾ; ೮೭ ಗೌತಮನ ಗೃಹತ್ಯಾಗ; ೮೮ ಗೃಹವೈದ್ಯ; ೮೯ ನಮ್ಮ ನಾಟಕಗಳು; ೯೦ ಜಾನಪದ ಕಥೆಗಳು; ೯೧ ಕೆಲವು ಉಪಯುಕ್ತ ಸಲಹೆಗಳು. ೯೨ ಅಭಿಜ್ಞಾನ ಶಾಕುಂತಲದಲ್ಲಿ ಲೋಕನೀತಿ. ೯೩ ಹೋಮಿಯೋಪಥಿ-ಚಿಕಿತ್ಸಾಸಾರ. ೯೪ ಯಕ್ಷಗಾನ ನಾಟಕದ ಪರಂಪರೆ; ೯೫ ಪುನರುಜ್ಜೀವನ (ಏಕಾಂಕ ನಾಟಕ).

*ಈ ಗುರುತು ಹಾಕಿದ ಪುಸ್ತಕಗಳ ಪ್ರತಿಗಳು ಮುಗಿದಿವೆ.

ಒಂದಾಣೆ ಮಾಲೆ, ಪ್ರಭಾತ ಆಫೀಸು, ರಥಬೀದಿ, ಮಂಗಳೂರು-೧.

ಪ್ರಸ್ತಾವನೆ

ಜಗತ್ತಿನ ಇತಿಹಾಸದಲ್ಲಿ ಅನೇಕ ಪ್ರಖ್ಯಾತ ಪ್ರಧಾನಾಮಾತ್ಯರು ಬಂದು, ಆಳಿ, ಹೋಗಿರುವರು. ಇಂಗ್ಲೆಂಡಿನ ವಿಲ್ಲಿಯಂ ಇವಾರ್ಟ್ ಗ್ಲೇಡ್‌ಸ್ಟೋನನು ೮೯ ವರ್ಷಗಳ ಕಾಲ ಬಾಳಿ, ತನ್ನ ಜೀವಿತಕಾಲದಲ್ಲಿ, ಅನೇಕ ಸಲ ಬ್ರಿಟ್ಯಿಸಿನ ಅರ್ಥಸಚಿವನಾಗಿಯೂ, ೧೮೬೮ರಿಂದ ೧೮೯೪ರೊಳಗೆ ನಾಲ್ಕು ಬಾರಿ ಪ್ರಧಾನ ಸಚಿವನಾಗಿಯೂ, ಅವನ ಕಾಲದ ರಾಜಕಾರಣಿಗಳಲ್ಲಿ ಅತ್ಯದ್ಭುತ ವಾಗೀಶನೆಂದೂ ಮೇಧಾವಿಯೆಂದೂ ಹೆಸರುಪಡೆದವನು. ವಿಲಿಯಂ ಪಿಟ್‌ನು, ಹದಿನೆಂಟನೇ ಶತಮಾನದಲ್ಲಿ, ತನ್ನ ೨೪ನೇ ವಯಸ್ಸಿನಲ್ಲಿ ಬ್ರಿಟ್ಯಿಸಿನ ಮಹಾ ಮಂತ್ರಿಯಾದ, (ಎರಡು ಬಾರಿ ಈ ಪದವಿಯನ್ನಲಂಕರಿಸಿದ) ದಾಖಲೆಯು ಇಂದಿಗೂ ಉಳಿದಿದೆ. ದ್ವಿತೀಯ ಮಹಾಯುದ್ಧ ಕಾಲದಲ್ಲಿ ಚರ್ಚಿಲ್ಲರು ಯುದ್ಧ ಪ್ರಭುವಾಗಿಯೂ ಸಮರ್ಥ ಪ್ರಧಾನಾಮಾತ್ಯರಾಗಿಯೂ ಜಾಗತಿಕ ಖ್ಯಾತಿ ಪಡೆದಿದ್ದಾರೆ. ಫ್ರಾನ್ಸಿನಲ್ಲ, ಹದಿನಾರನೇ ಶತಮಾನದಲ್ಲಿ ಕಾರ್ಡಿನಲ್ ರಿಚಲು ಎಂಬಾತನು ಮಹಾತಂತ್ರಜ್ಞನಾಗಿ ರಾಜಮನೆತನದ ಮೇಲೆ ಅಸಾಧಾರಣ ವರ್ಚಸ್ಸು ಬೀರಿ, ಮಹಾರಾಜ್ಞಿಯಿಂದಲೂ ಕದಲಿಸಲಾರದಂಥ ಸ್ಥಾನ ಪಡೆದವನು, ಮುಖ್ಯ ಮಂತ್ರಿಯೂ ಆಗಿದ್ದವನು. ಜರ್ಮನಿಯ ಬಿಸ್ಮಾರ್ಕನು ಕಳೆದ ಶತಮಾನದಲ್ಲ ಜರ್ಮನಿಯ 'ಉಕ್ಕಿನ ಮನುಷ್ಯ'ನಾಗಿ, ಯುರೋಪದ ರಾಜಕೀಯಂಗಳಲ್ಲಿ ತೀವ್ರ ವರ್ಚಸ್ಸು ಬೀರಿ, ಆಧುನಿಕ ಯುಗದ ಮೇಧಾವಿಗಳಲ್ಲೊಬ್ಬನೆನಿಸಿರುವನು. ಒಬ್ಬೊಬ್ಬರು ಒಂದೊಂದು ವಿಧವಾಗಿ ಹೆಸರುವಾಸಿಯಾಗಿರುವರು. ಆದರೆ, ಪ್ರಧಾನಾಮಾತ್ಯರ ಪರಂಪರೆಯಲ್ಲಿ ಪಂಡಿತ ಜವಾಹರಲಾಲ ನೆಹರುಗಳವರ ಹೆಸರು, ಈ ಶತಮಾನದಲ್ಲಿ ಅತ್ಯುಚ್ಚವಾಗಿ, ಪ್ರಪ್ರಥಮವಾಗಿ ರಾರಾಜಿಸುವುದು. ಗ್ಲೇಡ್‌ಸ್ಟೋನ್ ಮತ್ತು ಜವಾಹರಲಾಲರೊಳಗೆ ಇವೆರಡು ಸಾಮ್ಯಗಳು ತೋರುತ್ತವೆ: ಗ್ಲೇಡ್‌ಸ್ಟೋನರಂತೆ ಜವಾಹರರೂ ತಮ್ಮ ೫೭ನೇ ವಯಸ್ಸಿನಲ್ಲಿ ಪ್ರಧಾನಾಮಾತ್ಯರಾದರು; ಗ್ಲೇಡ್‌ಸ್ಟೋನರಂತೆ ಸರಿಸಾಟಿಯಿಲ್ಲದ ವಾಗ್ಮಿ ಮತ್ತು ರಾಜಕಾರಣಿಯಾಗಿರುವರು. ಆದರೆ, ಗ್ಲೇಡ್‌ಸ್ಟೋನರಿಗಿಂತ ತುಸು ಮುಂದರಿದು, ಜವಾಹರರು ಅಸ್ಪದ ಮುಖಂಡತ್ವ ವಹಿಸಿ ಜಗತ್ತಿನ ರಾಜಕೀಯಗಳಲ್ಲೇ ಅಸಾಧಾರಣ ವರ್ಚಸ್ಸು ಬೀರಿ, ಇಂದು ತಮ್ಮ ೬೬ನೇ ವರ್ಷ ಪ್ರಾಯದಲ್ಲೂ ಅತ್ಯಪೂರ್ವ ನವ ಚೈತನ್ಯವನ್ನೇ ಸದಾ ತೋರಿ, ದಿನದ ಇಪ್ಪತ್ತನಾಲ್ಕು ತಾಸುಗಳಲ್ಲಿ ಹದಿನೇಳು ಅಥವಾ ಹದಿನೆಂಟು ತಾಸು ಶ್ರಮಿಸುವ ಅಸಾಧಾರಣ ಪುರುಷರಾಗಿರುವರು. ಮಹಾತ್ಮಾಜಿಯವರನಂತರ ಜಗತ್ತಿನ ಅಸಂಖ್ಯಾಕ ಜನರ ಪ್ರೀತ್ಯಾದರಗಳನ್ನು ಹೊಂದಿರುವವರಲ್ಲಿ ಬಹುಶಃ ಜವಾಹರರಿಗೆ ಪ್ರಥಮ ಸ್ಥಾನ ಸಲ್ಲುತ್ತದೆ.

ಭಾರತದ ಮಹಾ ಪ್ರಧಾನರಾಗಿ, ನವಜಗತ್ತಿನ ಒಬ್ಬ ಶಿಲ್ಪಿಯಾಗಿ, ಜನರ ಹೃದಯಗಳಲ್ಲಿ ತುಂಬಿಕೊಂಡಿರುವ ಜವಾಹರರ ಜೀವನ ಚರಿತ್ರವು ಅದ್ಭುತರಮ್ಯವಾಗಿದೆ. ಈ ಚಿಕ್ಕ ಪಹಿಯಲ್ಲಿ ಆ ಚರಿತ್ರವನ್ನು ಅತೀ ಸಂಕ್ಷೇಪವಾಗಿ ಮಾತ್ರ ಹೇಳಲು ಸಾಧ್ಯವಿದೆ.

ಕುಡ್ಪಿ ವಾಸುದೇವ ಶೆಣ್ಯೆ.

ಪ್ರಧಾನಾಮಾತ್ಯ

ಪಂಡಿತ ಜವಾಹರಲಾಲ ನೆಹರು.

ಸಂಕ್ಷಿಪ್ತ ಜೀವನ ಚರಿತ್ರೆ

ಬಹುಕಾಲದ ಹಿಂದಿನ ಮಾತು. ಪಂಡಿತ ಜವಾಹರಲಾಲ ನೆಹರುಗಳವರ ಪೂರ್ವಜರು, ಕಾಶ್ಮೀರದಿಂದ ಢಿಲ್ಲಿಗೆ ಬಂದು ನೆಲಸಿದರು. ಅವರು ಕಾಶ್ಮೀರಿ ಬ್ರಾಹ್ಮಣರು. ಮೊಗಲರ ಕೈಕೆಳಗೆ ಅವರ ಹಿರಿಯರಿಗೆ ಉದ್ಯೋಗ ದೊರೆಯಿತು. ಬಾದಷಹನು ಅವರಿಗೆ 'ನಹರ್' (ನಾಲೆ ಅಥವಾ ಕಾಲುವೆ) ದಡದಲ್ಲಿ ಮನೆ ಕೊಟ್ಟುದರಿಂದ, (ಅವರ ಕೌಟುಂಬಿಕ ಉಪನಾಮ 'ಕೌಲ್') ರೂಢಿಯಾಗಿ ನೆಹರು ಎಂದು ಕರೆಯಲಾರಂಭಿಸಿದರು.

ನೆಹರು ಕುಟುಂಬವು ಢಿಲ್ಲಿಯಲ್ಲೇ ಶಾಶ್ವತ ನಿಲ್ಲಲಾಗಲಿಲ್ಲ. ೧೮೫೭ ರಲ್ಲಿ ಬ್ರಿಟಿಷರಿಗೆದುರಾಗಿ ಸಿಪಾಯಿದಂಗೆಯೆದ್ದಿತು. ಹಲವರು ಢಿಲ್ಲಿ ಬಿಟ್ಟು ಓಡಬೇಕಾಯಿತು. ನೆಹರು ಕುಟುಂಬವು ಆಗ್ರಕ್ಕೆ ಹೋಗಿ, ಅಲ್ಲಿ ಕೆಲವು ವರ್ಷ ಉಳಕೊಳ್ಳಬೇಕಾಯಿತು. ಮುಂದೆ, ಆಗ್ರದಿಂದ ಅಲ್ಲಹಾಬಾದಕ್ಕೆ ಬಂದು, ಅಲ್ಲೆ ನೆಲಸಿದರು. ಅವರ ಸಂತತಿ ಬೆಳೆಯಿತು. ೧೮೮೯ ರಲ್ಲಿ, ಪಂಡಿತ ಮೋತಿಲಾಲರಿಗೆ ಪುತ್ರಜನನವಾಯಿತು. ಗೃಹದೊಳಗಿನ ಮೊದಲ ಮಗು. ಮಗುವಿಗೆ ಜವಾಹರನೆಂದು ನಾಮಕರಣವಾಯಿತು.

ಜವಾಹರನು ಬಾಲ್ಯಕಾಲದಿಂದಲೂ ಚಟುವಟಿಕೆಯ ಹುಡುಗ. ಶ್ರೀಮಂತಿಕೆಯಲ್ಲಿ ಹುಟ್ಟಿ ಬೆಳೆದ ಬಾಲಕ. ಎಫ್. ಟಿ. ಬ್ರೂಕ್ಸ್ ಎಂಬ ಆಂಗ್ಲೇಯನನ್ನು ಜವಾಹರನಿಗೆ ಇಂಗ್ಲಿಷ್ ಅಧ್ಯಾಪಕನಾಗಿ ನೇಮಿಸಿದರು. ಈ ಬ್ರೂಕ್ಸನು ಹಿಂದೂದೇಶದ ಮೇಲೆ ಅಭಿಮಾನವಿದ್ದವನು; ಥಿಯೊಸೊಫಿಸ್ಟ್ ಆಗಿದ್ದು, ಜವಾಹರರಿಗೂ ಥಿಯೊಸೊಫಿ ಬೋಧಿಸಿದ್ದುಂಟು. ಅದೇನೆಂದು ಅರ್ಥವಾಗದ ಜವಾಹರರು ಆ ಸೊಸೈಟಿಯ ಕಿರಿಯ ಸದಸ್ಯನಾದುದೂ ಉಂಟು. ಆದರೆ, ಬ್ರೂಕ್ಸ್ ಬಿಟ್ಟುಹೋದ ಬೆನ್ನಲ್ಲೆ, ಬಾಲಕ ಜವಾಹರನು ಥಿಯೊಸೊಫಿಯನ್ನೂ ಬಿಟ್ಟನು.

ಜವಾಹರರು, ಬ್ರೂಕ್ಸನು ನಿರವಿಸಿದ ಲೂಯಿಸ್ ಕೆರಲನ ಗ್ರಂಥಗಳನ್ನೂ, ಸ್ಕೊಟ್, ಡಿಕನ್ಸ್, ಥೆಕರೆ ಮತ್ತು ವೆಲ್ಸರ ಕಾದಂಬರಿಗಳನ್ನೂ ಆ ಕಾಲದಲ್ಲಿ ಓದಿ ಮುಗಿಸಿದ್ದರು.

ಪಂಡಿತ ಮೋತಿಲಾಲರ "ಆನಂದ ಭವನ"ವು ಅಕ್ಷರಶಃ ಆನಂದದಿಂದ ತುಂಬಿದ್ದ ಭವನವೇ ಆಗಿದ್ದಿತು. ಅರಮನೆಯಂಥ ಗೃಹ, ವಿಶಾಲ ತೋಟ, ಈಜುವ ಕೊಳಗಳು,—ಆ ಕಾಲದ ಎಲ್ಲ ಸೌಕರ್ಯಗಳೂ ಅಲ್ಲಿದ್ದುವು. ನಿತ್ಯವೂ ಹಲವು ಅತಿಥಿಗಳು ಬರುತ್ತಿದ್ದರು. ಬಾಲಕನನ್ನು ವಯೋವೃದ್ಧ ಮುನ್ಶಿಜಿ ಹಿಡಿದಾಡಿಸುತ್ತ, ನಡೆಸುತ್ತ, ಆಗಾಗ್ಗೆ ತೋಟದಲ್ಲಿ ಕುಳ್ಳಿರಿಸಿ, ಗಲಾಟೆಯ ಸಿಪಾಯಿದಂಗೆಯ ಕಥೆಯನ್ನು ಹೇಳುತ್ತ ಭಾರತೀಯರು ತಮ್ಮ ಸ್ವಾತಂತ್ರ್ಯಕ್ಕಾಗಿ ಹೇಗೆ ಧೀರತೆಯಿಂದ ಕಾದಾಡಿದರು ಎಂದು ವಿವರಿಸುತ್ತಿದ್ದನು. ಅದನ್ನು ಕೇಳಿ, ಬಾಲಕ ಜವಾಹರನ ಹೃದಯವು ತನ್ನ ಜನರ ಧೈರ್ಯ—ಶೌರ್ಯಗಳಿಗಾಗಿ ಗೌರವದಿಂದ ತುಂಬುವುದು. ಮುನ್ಶಿಜಿ, ಬಾಲಕನಿಗೆ, 'ಅರೇಬಿಯನ್ ನಾಯಿಟ್ಸ್' ಕಥೆಗಳನ್ನೂ ಹೇಳುವನು. ಅಲ್ಲಾವುದ್ದೀನನ ವಿಚಿತ್ರ ದೀಪ, ವಾಯುವೇಗದಲ್ಲಿ ಚಲಿಸುವ ಕುದುರೆಗಳು ಜವಾಹರನ ಮನಸ್ಸನ್ನು ನಲಿಸುವುವು. ಒಂದು ದಿನ ತಂದೆಯು ಬಾಲಕ ಜವಾಹರನಿಗೆ 'ರುಕ್ಷ' ಎಂಬ ಅರಬ್ಬಿ ಕುದುರೆಯನ್ನು ಕೊಟ್ಟನು. ಅಂದು ಅಲ್ಲಹಾಬಾದದಲ್ಲಿ ಜವಾಹರನಿಗಿಂತ ಅಧಿಕ ಸಂತೋಷಿ ಬಾಲಕನು ಮತ್ತೊಬ್ಬನಿರಲಿಲ್ಲ. ಜವಾಹರನು 'ರುಕ್ಷ'ನನ್ನು ಸವಾರಿಮಾಡತೊಡಗಿ, ಮರಳಿ ಬಂದಾಗ ಮುನ್ಶಿಗೆ ಕಲ್ಪನೆಯ ಕಥೆಗಳನ್ನು ಹೇಳುವನು. ಮುನ್ಶಿಯೂ ಜವಾಹರನೂ ಹೀಗೆ ಕಲ್ಪನಾಸಾಮ್ರಾಜ್ಯದಲ್ಲಿ ತೊಡಗಿದ್ದುಂಟು. ಒಂದು ದಿನ, ಜವಾಹರನು 'ರುಕ್ಷ'ನನ್ನು ನಾಗಾಲೋಟದಿಂದ ಓಡಿಸಿ, ಕೆಳಗೆ ಬಿದ್ದನು. ಕುದುರೆ ಓಡಿ ಓಡಿ ಆನಂದಭವನಕ್ಕೆ ಮರಳಿ ಬಂತು. ಮನೆಯವರು ಗಾಬರಿಯಿಂದ ಬಾಲಕನನ್ನು ಹುಡುಕಿ ಬರುವಾಗ, ಅತಿ ದೂರದಲ್ಲಿ ಬಾಲಕನು ನಡೆದುಬರುತಿದ್ದನು. ಯಾವ ಹಾನಿಯೂ ಆಗಿರಲಿಲ್ಲ. ಈ ಘಟನೆಯಿಂದ ಜವಾಹರನಿಗೆ 'ರುಕ್ಷ'ನ ಮೇಲೆ ಕೋಪವುಂಟಾಗಲಿಲ್ಲ. ಎಂದಿನಂತೇ ಅವನು ವಿಹಾರಾರ್ಥ ಹೋಗಿ ಬರುತಿದ್ದನು.

ಹಬ್ಬಗಳೆಂದರೆ ಜವಾಹರನಿಗೆ ಬಲು ಪ್ರೀತಿ. ಹೋಳಿ ಉತ್ಸವದಂದು ಅವನು, ಬಣ್ಣದ ನೀರು ತುಂಬಿದ ಪಿಚಕಾರಿಯಿಂದ ಆನಂದಭವನದ

ಬಯಲು ತುಂಬ ಓಡಾಡಿ, ಎದುರಾದವರೆಲ್ಲರಿಗೆ ಓಕುಳಿಯ ತಂಪನ್ನು ಕೊಡುತಿದ್ದನು. ದೀಪಾವಳಿ ಕಾಲದಲ್ಲೂ, ತನ್ನ ಜನ್ಮದಿನೋತ್ಸವದಂದೂ ಬಾಲಕನ ಉತ್ಸಾಹಕ್ಕೆ ಮಿತಿಯೇ ಇರುತ್ತಿರಲಿಲ್ಲ. ಹುಟ್ಟುಹಬ್ಬದಂದು ಬಾಲಕನನ್ನು ತಕ್ಕಡಿಯಲ್ಲಿ ಕುಳ್ಳಿರಿಸಿ, ಇನ್ನೊಂದರಲ್ಲಿ ಗೋದಿ ಮತ್ತು ಇತರ ಧಾನ್ಯಗಳನ್ನು ಹಾಕಿ 'ತುಲಾಭಾರ' ಮಾಡಿ, ಆ ಧಾನ್ಯವನ್ನು ಬಡವರಿಗೆ ಹಂಚುವ ಕ್ರಮವಿರುತಿತ್ತು.

ಬಾಲಕನು ಅತಿ ಚಿಕ್ಕ ಪ್ರಾಯದಲ್ಲೆ ಈಜನ್ನೂ ಕಲಿತಿದ್ದನು. ದೊಡ್ಡವರೊಂದಿಗೆ ಈಜುಕೊಳಕ್ಕೆ ಪ್ರವೇಶಿಸಿ, ಅವರೊಡನೆ ಆಡಿ, ದಣಿಸುತಿದ್ದನು. ಕೊಳದ ಬಳಿ ನಿಂತು ಇಣಿಕುವವರ ಹಿಂದೆ ಮೆಲ್ಲನೆ ಹೋಗಿ, ಅವರನ್ನು ನೀರಿಗೆ ದೂಡುವ ತುಂಟತನ ತೋರುತಿದ್ದನು.

ಒಮ್ಮೆ, ಬಾಲಕ ಜವಾಹರನು, ತನ್ನ ತಂದೆಯು ಅತಿಥಿಗಳೊಡನೆ ದ್ರಾಕ್ಷಾರಸ ಕುಡಿಯುವುದನ್ನು ಅಡಗಿ ನಿಂತು ನೋಡಿ, ತಾಯಿ ಬಳಿಗೆ ಓಡಿ ಹೋಗಿ, "ಮಾ, ಅಪ್ಪನು ನೆತ್ತರು ಕುಡಿಯುತಿದ್ದಾನೆ!" ಎಂದು, ಗಾಬರಿಯಿಂದ ಹೇಳಿದನೆಂದು, ಜವಾಹರರು ತನ್ನ ಆತ್ಮಕಥೆಯಲ್ಲೊಂದು ಕಡೆ ಹೇಳಿರುತ್ತಾರೆ.

ಜವಾಹರನಿಗೆ ಹತ್ತು ವರ್ಷವಾದಾಗ, ಅವನ ತಾಯಿ ಸ್ವರೂಪರಾಣಿಯವರು ಹೆಣ್ಣು ಶಿಶುವನ್ನು (ವಿಜಯಲಕ್ಷ್ಮಿ) ಹೆತ್ತರು.

ಹನ್ನೊಂದನೇ ವರ್ಷದಲ್ಲಿ ಜವಾಹರರ ಶಿಕ್ಷಣಕ್ಕೆ, ಮೇಲೆ ಉಲ್ಲೇಖಿಸಿದ ಬ್ರೂಕ್ಸ್‌ನನ್ನು ನೇಮಿಸಿದ್ದರು. ಬ್ರೂಕ್ಸನು ಹೆಚ್ಚು ಕಾಲ ನಿಲ್ಲಲಾಗಲಿಲ್ಲ.

ಹೀಗೇ ಕೆಲಕಾಲಾನಂತರ, ೧೯೦೫ನೇ ಮೇ ತಿಂಗಳಲ್ಲಿ, ಜವಾಹರನಿಗೆ ಹದಿನೈದನೇ ವರ್ಷ ಪ್ರಾಪ್ತವಾದಾಗ, ಪಂಡಿತ ಮೋತಿಲಾಲರು ಕುಟುಂಬ ಸಹಿತ ಇಂಗ್ಲೆಂಡಿಗೆ ಹೊರಟರು. ಇಂಗ್ಲೆಂಡಿನ ರಾಜಕುಮಾರರೂ ಲೊರ್ಡ್ ಮನೆತನದವರೂ ತಮ್ಮ ಮಕ್ಕಳನ್ನು ಕಳಿಸುತಿದ್ದ ಹೆರೋ ವಿದ್ಯಾಸಂಸ್ಥೆಗೆ ಜವಾಹರನನ್ನೂ ಸೇರಿಸಿದರು. ಆ ಕಾಲದಲ್ಲೇ, ಜವಾಹರರ ಸಹಪಾಠಿಗಳಾಗಿ ಬರೋಡೆಯ ಯುವರಾಜರೂ, ಕಪುರ್ತಲಾ ರಾಜಕುಮಾರರೇ ಮೊದಲಾದವರಿದ್ದರು. ಮೋತಿಲಾಲರು, ಜವಾಹರನನ್ನು ಅಲ್ಲಿ ಬಿಟ್ಟು, ಪತ್ನೀ-ಪುತ್ರಿಯೊಂದಿಗೆ ಯುರೋಪಿಗೆ ತೆರಳಿ, ಅಲ್ಲಿ ಸಂಚರಿಸಿ, ಸ್ವದೇಶಕ್ಕೆ

ಮರಳಿದರು. ಜವಾಹರರಿಗೆ, ಮನೆಯನ್ನೂ ದೇಶವನ್ನೂ ಬಿಟ್ಟು ಬಂದ ಈ ಮೊದಲನೇ ಅನುಭವವು ಮನೆಯಾಸೆಯನ್ನೇ ಉಂಟುಮಾಡುವಂತಾಗಿತ್ತು. ಇಂಗ್ಲಿಷ್ ಯುವಕರ ಜೀವನವು ಅವರಿಗೆ ಮೊದಲು ರುಚಿಸಲಿಲ್ಲ. ಅವರು ತಮ್ಮ ಪಾಠ ಮತ್ತು ಆಟಗಳ ವಿಷಯವಾಗಿಯೇ ಮಾತಾಡಿಕೊಳ್ಳುತಿದ್ದರು. ಜವಾಹರರು, ಸದಾ ವೃತ್ತಪತ್ರಿಕೆಗಳನ್ನೋದುತ್ತ, ಜಗತ್ತಿನ ವಿದ್ಯಮಾನಗಳನ್ನು ಅಭ್ಯಸಿಸುತಿದ್ದರು. ಒಂದು ದಿನ, ಶಾಲಾ ಅಧ್ಯಾಪಕರು, ಇಂಗ್ಲೆಂಡಿನಲ್ಲಿ ಆಗ ತಾನೆ ನಡೆದ ಮಹಾಚುನಾವಣೆಗಳ ವಿಷಯವಾಗಿ ಪ್ರಶ್ನಿಸಿದಾಗ, ಜವಾಹರರೊಬ್ಬರೇ ಅಲ್ಲಿ ಹೊಸದಾಗಿ ಅಧಿಕಾರಕ್ಕೆ ಬಂದ ಸರಕಾರದ ವಿಷಯವಾಗಿ ಹೇಳಲು ಸಮರ್ಥರಾಗಿ, ಮೆಚ್ಚುಗೆ ಪಡೆದರು.

ಜವಾಹರರು ತನ್ನ ದೇಶದಿಂದ ದೂರವಿದ್ದರೂ, ವೃತ್ತ ಪತ್ರಿಕೆಗಳ ಮೂಲಕ ಎಲ್ಲವನ್ನೂ ತಿಳಿದುಕೊಳ್ಳುತ್ತಿದ್ದರು. ಆಗ, ಬಂಗಾಳದ ವಿಭಜನೆಯುಂಟಾಗಿ, ಅದರಿಂದ ದೇಶದ ಜನರು ಪ್ರಕ್ಷುಬ್ಧಗೊಂಡಿದ್ದರು. ವಿದೇಶೀ ವಸ್ತುಗಳ ಬಹಿಷ್ಕಾರ, ಸ್ವದೇಶಿಗೆ ಪುರಸ್ಕಾರ—ಎಂಬ ಕೂಗು ಎದ್ದಿತ್ತು. ಪಂಜಾಬಕೇಸರಿ ಲಾಲಾ ಲಜಪತ ರೈಗಳಂಥವರಿಗೆ ಗಡಿಪಾರು ಶಿಕ್ಷೆ ವಿಧಿಸಲ್ಪಟ್ಟಿತ್ತು. ತಿಲಕರ ಸಿಂಹನಾದವು ಕೇಳಿಸಿತ್ತು. ಜವಾಹರರು ಇದನ್ನೆಲ್ಲ ಓದುತ್ತ, ಕೆರಳಿದರು. ಆದರೆ, ಆ ವಿಷಯವಾಗಿ ಅಲ್ಲಿ ಯಾರೊಡನೆಯೂ ಚರ್ಚಿಸುವಂತಿರಲಿಲ್ಲ. ಅಶಾಂತ ಮನಸ್ಸನ್ನು, ಜಗತ್ತಿನಲ್ಲಿ ಸ್ವಾತಂತ್ರ್ಯಕ್ಕಾಗಿ ಕಾದಾಡಿದ ಮಹಾಪುರುಷರ ವೃತ್ತಗಳನ್ನೋದಿ ತಣಿಸಲು ಯತ್ನಿಸಿದರು.

ಹೆರೋ ವಿದ್ಯಾಸಂಸ್ಥೆಯ ಶಿಕ್ಷಣ ಮುಗಿಸಿ, ಜವಾಹರರು ಕೇಂಬ್ರಿಜ್ ವಿಶ್ವವಿದ್ಯಾಲಯವನ್ನು ಸೇರಿದರು. ಅಲ್ಲಿ, ಇತರ ಶ್ರೀಮಂತ ವಿದ್ಯಾರ್ಥಿಗಳ ಅನುಕರಣೆ ಮಾಡಿ ಹೇರಳ ಹಣ ವ್ಯಯಿಸತೊಡಗಿದಾಗ, ಮೋತಿಲಾಲರಿಗೆ ಯೋಚನೆಯುಂಟಾದುದಿದೆ. ಆದರೆ, ಜವಾಹರರು ಈ ಮಂದು ವ್ಯಯದ ಮರುಳನ್ನು ಬೇಗನೇ ಬಿಟ್ಟುಕೊಟ್ಟು, ತಮ್ಮ ಪದವಿಗಾಗಿ (ಬಿ. ಎ. ಆನರ್ಸ್) ಮೂರು ವರ್ಷಗಳ ಕಾಲ ಶ್ರದ್ಧೆಯಿಂದ ಕಲಿಯತೊಡಗಿದರು. ಈ ಕಾಲದಲ್ಲೇ ಅವರು, ನೆಹರು ಕುಟುಂಬದಲ್ಲಿ ಇನ್ನೋರ್ವ ಹೆಣ್ಣು ಶಿಶುವಿನ ಕೂಡಿಕೆಯಾಯಿತೆಂಬುದನ್ನು (ಕೃಷ್ಣಾ) ಕೇಳಿದರು. ಈ ವಿದ್ಯಾರ್ಥಿಯ ತೀಕ್ಷ್ಣಮತಿಯನ್ನು ಗುರುತಿಸಿ, ಕೇಂಬ್ರಿಜ್ ವಿಶ್ವವಿದ್ಯಾಲಯದವರು, ಆಗಲೇ 'ಎಮ್. ಎ., ಆನರ್ಸ್' ಡಿಗ್ರಿಯನ್ನೂ ಕೊಟ್ಟು ಭೂಷಿಸಿದರು.

ಕೇಂಬ್ರಿಜ್ ಶಿಕ್ಷಣ ಮುಗಿದು ಜವಾಹರರು, "ಐ. ಸಿ. ಎಸ್." ಕಲಿವ ಆಲೋಚನೆ ಮಾಡಿದರೂ, ಕಡಿಮೆ ವಯಸ್ಸಿನ ನಿರ್ಬಂಧಗಳಿಂದಾಗಿ ಸಾಧ್ಯ ವಾಗಲಿಲ್ಲ. ಅದಕ್ಕಾಗಿ, ತನ್ನ ತಂದೆಯಂತೇ ಬೆರಿಸ್ಟರನಾಗಲು ನಿರ್ಧರಿಸಿ, ಲಂಡನಿಗೆ ಬಂದರು. ಅಲ್ಲಿ ಕಾನೂನು ಕಲಿಯಲಾರಂಭಿಸಿದರು. ಈ ಶಿಕ್ಷಣ ಕಾಲವಲ್ಲಿ ಜವಾಹರರು, ಅನುವು ದೊರೆತಾಗ ಯುರೋಪಿನ ದೇಶಗಳಿಗೂ ಹೋಗಿ ಬರುತಿದ್ದರು. ಒಮ್ಮೆ ಜರ್ಮನಿಯ ರಾಜಧಾನಿ ಬರ್ಲಿನ್ ನಗ ರಕ್ಕೆ ತನ್ನ ತಂದೆಯೊಂದಿಗೆ ಹೋದಂದು, ಕೌಂಟ್ ಝೆಪೆಲಿನರ ನೂತನ ರಚನೆಯಾದ 'ವಾಯುಹಡಗ'(Zeppelin) ಪ್ರಥಮ ಹಾರಾಟ ಕಂಡರು. ಅಂದು ಬರ್ಲಿನ್ ನಗರವಿಡೀ ಸಂತೋಷಾಧಿಕ್ಯದಿಂದ ಉದ್ರೇಕಗೊಂಡಿತ್ತು. ಆಳರಸ ಕೈಝರರು ಸ್ವತಃ ಬಂದು ಕೌಂಟ್ ಝೆಪೆಲಿನರನ್ನು ಗೌರವಿಸಿ ದರು. ರಾತ್ರಿಯಿಡೀ ಆ ನಗರದಲ್ಲಿ ಮಹೋತ್ಸವಗಳು ಜರಗಿದ್ದುವು. ಝೆಪೆಲಿನರ ಚಿತ್ರವನ್ನು ಜನರಿಗೆ ಹಂಚಿದರು: ಜವಾಹರರಿಗೂ ಒಂದು ಸಿಕ್ಕಿತು. ಕೌಂಟ್ ಝೆಪಲಿನರ ಅಂದಿನ ಆ ಚಿತ್ರವು, ಜವಾಹರರೊಡನೆ ಈಗಲೂ ಇದೆ. ಇನ್ನೊಮ್ಮೆ ಜವಾಹರರು, ನೊರ್ವೆಯಲ್ಲಿ ತನ್ನ ಸ್ನೇಹಿತ ರೊಂದಿಗೆ ವಿಹರಿಸುತಿದ್ದಾಗ, ತಾನು ಉಳಕೊಂಡ ಹೊಟೇಲಿನಲ್ಲಿ ಸ್ನಾನದ ಸೌಕರ್ಯವಿಲ್ಲವೆಂದು ಕೇಳಿ, ಬಳಿಯ ಪರ್ವತ ಪ್ರವಾಹದಲ್ಲಿ ಮೀಯಲು ಹೋಗಿ, ಸಾಮಾನ್ಯರಾರೂ ಧೈರ್ಯಪಡದಂಥ ಆ ಅಪಾಯಕರ ಪ್ರವಾಹ ದಲ್ಲಿಳಿದಾಗ ತೇಲಿಹೋದರೆಂದೂ, ಪ್ರವಾಹವು ಒಂದು ಕಡೆ ಅತಿ ಎತ್ತರದಿಂದ ಕೆಳಗಿನ ಬಂಡೆಗೆ ಬೀಳುವಲ್ಲಿಗೆ ತುಸು ದೂರ, ಅವರ ಸ್ನೇಹಿತನೊಬ್ಬನು ಓಡಿ ಓಡಿ ಅವರ ಕಾಲನ್ನು ಹಿಡಿದೆಳೆದು ಬದುಕಿಸಿದನೆಂದೂ ಹೇಳಲಾಗಿದೆ.

೧೯೧೨ರಲ್ಲಿ ಜವಾಹರರು ಬಾರ್-ಎಟ್-ಲೋ ಪದವಿ ಪಡೆದು ಸ್ವದೇ ಶಕ್ಕೆ ಮರಳಿದಾಗ, ೧೯೦೭ರ ಬಂಗಾಳ ವಿಭಜನೆಯಿಂದುಂಟಾದ ಚಳವಳವು ನಿಂತಿತ್ತು. ಮೋತಿಲಾಲರು ಸ್ವಾತಂತ್ರ್ಯ ಸಂಬಂಧವಾದ ಬದಲಾವಣೆಗಳು ಕ್ರಮೇಣ ಮತ್ತು ಮೆಲ್ಲಗೆ ಬರತಕ್ಕುವೆಂಬ ನಂಬುಗೆ ತಾಳಿದ್ದರು. ಇದು ಜವಾ ಹರರಿಗೆ ತೃಪ್ತಿಕರವೆನಿಸಲಿಲ್ಲ. ಅವರು ತನ್ನ ತಂದೆಯೊಡನೆ ಆ ವಿಷಯದಲ್ಲಿ ಅಭಿಪ್ರಾಯಭೇದ ತಾಳಿದ್ದರು. (ಒಮ್ಮೆ ಜವಾಹರರು ಇಂಗ್ಲೆಂಡಿನಲ್ಲಿದ್ದಾಗ, ತನ್ನ ತಂದೆ ಬಂಗಾಳದಲ್ಲಿನ ಕೆಲವು ಹಿಂದೀಯರ ಹಿಂಸಾತ್ಮಕ ಕೃತ್ಯಗಳನ್ನು ನಿಷೇಧಿಸಿದ್ದನ್ನು ಕೇಳಿ, ತಂದೆಗೆ, "ಅಪ್ಪಾ, ನಿಮ್ಮ ಅಭಿಪ್ರಾಯಗಳಿಂದ ಸರ

ಕಾರಕ್ಕೆ ಬಹಳ ಸಹಾಯವಾಯಿತೆಂಬುದು ನಿಶ್ಚಯ" ಎಂದು ಬರೆದರೆಂದೂ ಮೋತಿಲಾಲರು, ಹುಡುಗನ ಈ 'ಉದ್ಧಟತನ'ಕ್ಕೆ ಕುಪಿತರಾದರೆಂದೂ, ಮಗನನ್ನು ಸ್ವದೇಶಕ್ಕೆ ಆ ಕೂಡಲೇ ಹಿಂದ ಕರೆಸುವ ಆಲೋಚನೆ ಕೂಡ ಮಾಡಿದ್ದರೆಂದೂ ಹೇಳಲಾಗಿದೆ. ಹಿರಿಯರ ಅಭಿಪ್ರಾಯಗಳ ಮುಂದೆ ಇನ್ನು ದುಡುಕಲಾರವೆ ಜವಾಹರರು, ಅಲ್ಲಾಹಾಬಾದವಲ್ಲಿ, ತನ್ನ ತಂದೆಯ ನಿರ್ದೇಶನದಲ್ಲಿ, ವಕೀಲಿವೃತ್ತಿ ಆರಂಭಿಸಿದರು. ತನ್ನ ತಂದೆಯನ್ನು ಅವರು ಪ್ರತಿಭಟಿಸಲು ಆಗ ಧೈರ್ಯಪಡುತ್ತಿರಲಿಲ್ಲ. ತಂದೆಯ ಮೇಲೆ ಅವರಿಗೆ ಗೌರವವೂ ಇದ್ದಿತು. ಮೋತಿಲಾಲರನ್ನು ಪ್ರತಿಯೊಬ್ಬರೂ ಗೌರವಿಸು ತಿದ್ದರು.

ಮೋತಿಲಾಲರು ಪರ್ಶಿಯನ್ ಮತ್ತು ಉರ್ದು ಪಂಡಿತರಿದ್ದರು. ಹಾಗೇ ಪಾಶ್ಚಿಮಾತ್ಯರ ಸಂಸ್ಕೃತಿ ಮತ್ತು ರೂಢಿಗಳನ್ನೂ ಚೆನ್ನಾಗಿ ಬಲ್ಲವ ರಿದ್ದು, ಬ್ರಿಟಿಷರ ಆಡಳಿತವನ್ನು ಹೋರಾಡಿದರೂ, ಬ್ರಿಟಿಷರಿಂದ ನಾವು ಕಲಿತುಕೊಳ್ಳಬೇಕಾದುದೆಷ್ಟೋ ಇದೆ ಎಂದು ತಿಳಿದಿದ್ದರು. ಭಾರತವೂ ಯುರೋಪಿನ ದೇಶಗಳಂತೆ ಮುಂದುವರಿಯಬೇಕೆಂದು ಇಚ್ಛಿಸುತಿದ್ದರು, ಜವಾಹರರೂ, ಇದೇ ತೆರ, ತನ್ನ ತಂದೆಯ ಅಭಿಪ್ರಾಯಗಳನ್ನೇ ಬಲು ಮಟ್ಟಿಗೆ ಅನುಮೋದಿಸುತಿದ್ದವರು. ಇಂಗ್ಲಿಷರನ್ನು ಮೆಚ್ಚುತಿದ್ದರು. ಬಾಲ್ಯದಿಂದಲೇ ವಿದೇಶೀ ರೀತಿನೀತಿಗಳಿಂದೆಂಬಂತೆ ಬೆಳೆಸಲ್ಪಟ್ಟು, ಇಂಗ್ಲಿಷ್ ಅಧ್ಯಾಪಕರಿಂದಲೂ ಇಂಗ್ಲಿಷ್ ದಾದಿಗಳಿಂದಲೂ ಆರೈಕೆ ಹೊಂದುತಿದ್ದ ಅವರು ಹೀಗೆ ಸುಲಭವಾಗಿ ಇಂಗ್ಲಿಷರನ್ನು ಮೆಚ್ಚುವುದು ಆಶ್ಚರ್ಯವಲ್ಲ.

ಜವಾಹರರು ಬಿಡುವಿದ್ದಾಗ, ಆಗಾಗ್ಗೆ ಶಿಕಾರಿಗೆ ಹೋಗುತಿದ್ದರು. ಒಮ್ಮೆ ಒಂದು ಚಿಕ್ಕ ಜಿಂಕೆಯನ್ನು ಗುಂಡಿನಿಂದ ಹೊಡೆದು, ರಕ್ತಮಯವಾಗಿ ಬಿದ್ದು ಕರುಣಾರ್ದ್ರ ದೃಷ್ಟಿಯಿಂದ ನೋಡುತ್ತಿದ್ದ ಆ ನಿಷ್ಪಾಪಿ ಪ್ರಾಣಿಗಾಗಿ ಜವಾಹರರ ಕರುಳು ಕತ್ತರಿಸಿದಂತಾಗಿ, ಇನ್ನು ಮುಂದೆ ಶಿಕಾರಿ ಮಾಡುವು ದಿಲ್ಲವೆಂದು ಶಪಥ ತೊಟ್ಟುಕೊಂಡರು. (ಜವಾಹರರ ಪ್ರಾಣಿದಯೆಯ ವಿಷಯವಾಗಿ ಅನೇಕ ಕಥೆಗಳಿವೆ.)

೧೯೧೪ರಲ್ಲಿ ಪ್ರಥಮ ಜಾಗತಿಕ ಯುದ್ಧ ಆರಂಭವಾಗಿ ೧೯೧೮ಕ್ಕೆ ಮುಗಿಯುತ್ತಾ ಬರುವಾಗ, ಮೋತಿಲಾಲರೊಡನೆ ಮತ್ತು ಇತರ ಹಿರಿಯ ಕೊಂಗ್ರೆಸ್ ನಾಯಕರೊಡನೆ ಜವಾಹರರೂ, (ತಮ್ಮ ರಾಜಕೀಯ ಅಭಿ

ಪ್ರಾಯಗಳಿಗಾಗಿ ತಂದೆಯೊಡನೆ ವಾಗ್ಯುದ್ಧ ನಡೆಸಿದರೂ) ಸ್ವಾತಂತ್ರ್ಯ ಚಳವಳಿಯಲ್ಲಿ ಸೇರಿದರು. ಜವಾಹರರ ಪ್ರಥಮ ಸಾರ್ವಜನಿಕ ಭಾಷಣವು ಅಲ್ಲಹಾಬಾದದಲ್ಲಿ ನಡೆಯಿತು. ದೊಡ್ಡ ಜನಸಂದಣಿಯನ್ನೆದುರಿಸಿ ಮಾತಾಡಲು ನಾಚುತಿದ್ದ ಜವಾಹರರು ಅಂದಿನಿಂದ ಒಂದೇ ಸವನೆ ಬಯಲಿಗೆ ಧುಮುಕಿದರು. ಅಂದಿನಿಂದ, ಬಹುವ್ಯಯದ ವಿಲಾಸೀ ಜೀವನವನ್ನು ಕ್ರಮೇಣ ಬಿಟ್ಟುಬಿಡತೊಡಗಿದರು. 'ಹೋಮ್‌ರೂಲ್' ಚಳವಳದಲ್ಲಿ ಸಹಾಯಕರಾದರು.

೧೯೧೬ರಲ್ಲಿ, ವಸಂತಪಂಚಮಿಯ ದಿನ ಜವಾಹರರು, ಹದಿನೇಳು ವರ್ಷ ಪ್ರಾಯದ ಕನ್ಯೆ ಕಮಲಾ ಕೌಲರನ್ನು ಲಗ್ನವಾದರು. ವಿವಾಹವು ಅತೀ ವಿಜೃಂಭಣೆಯಿಂದ ಜರಗಿತು. ವಿವಾಹಾನಂತರ, ಕಾಶ್ಮೀರಕ್ಕೆ "ಮಧು ಮಾಸ"ಕ್ಕೆ ತೆರಳಿದರು. ಅದೇ ವರ್ಷ ಮಹಾತ್ಮಾಜಿಯವರನ್ನು, ಲಕ್ನೋ ಕೊಂಗ್ರೆಸ್ ಕಾಲದಲ್ಲಿ ಪ್ರಥಮತಃ ಕಂಡರು. ೧೯೧೭ರಲ್ಲಿ ಜವಾಹರರಿಗೆ ಹೆಣ್ಣು ಮಗು ಜನಿಸಿತು. ಮಗುವಿಗೆ "ಇಂದಿರಾ ಪ್ರಿಯದರ್ಶಿನಿ" ಎಂದು ನಾಮಕರಣ ಮಾಡಿದರು.

ಗಾಂಧಿಜಿಯವರು ದಕ್ಷಿಣಾಫ್ರಿದಲ್ಲಿ, ಹಿಂದೀಯರ ಸ್ಥಾನಮಾನಗಳಿಗಾಗಿ ಹೋರಾಡಿ, ಕಾರಾಗೃಹವಾಸವನ್ನೂ ಅನುಭವಿಸಿ, ಸ್ವದೇಶಕ್ಕೆ ಮರಳಿದ್ದರು: ಆ ಕಾಲದಲ್ಲಿ, ಯುದ್ಧರಂಗದಿಂದ ನಿವೃತ್ತಿ ಹೊಂದಿ ಮರಳಿದ ಸೈನಿಕರು ಕೆಲವರು ಅತೃಪ್ತರಾಗಿ, ಪಂಜಾಬದಲ್ಲಿ ಕೆಲವು ಹಿಂಸಾಕೃತ್ಯಗಳು ನಡೆದುವು. ಸರಕಾರವು ತೀವ್ರ ಕಾರ್ಯಕ್ರಮ ಕೈಕೊಂಡಿತು. ನಿರಪರಾಧಿಗಳು ಶಿಕ್ಷಿಸಲ್ಪಟ್ಟರು. ಗಾಂಧಿಜಿಯವರು ಆ ಕಾಲದಲ್ಲಿ ನಮಗೆ, ಸಹನೆ-ತ್ಯಾಗಗಳ ಉಪದೇಶಮಾಡಲುಪಕ್ರಮಿಸಿದರು. ಅಹಿಂಸೆಯನ್ನು ಬೋಧಿಸಿದರು. ಆತ್ಮಬಲ, ಸತ್ಯದ ಮಹಿಮೆಯನ್ನು ವಿಶದೀಕರಿಸಿದರು. ಸತ್ಯಾಗ್ರಹ ಚಳವಳವು ರೂಪಿಸಿ ಬಂತು (೧೯೨೦). ಆಗಲೇ ಪಂಜಾಬದ "ಜಲಿಯನ್‌ವಾಲಾಭಾಗ್ ಅತ್ಯಾಚಾರ" ಪ್ರದೇಶದಲ್ಲಿ ಸಂತಾಪವನ್ನುಂಟುಮಾಡಿತು. ಜಲಿಯನ್‌ವಾಲಾಬಾಗದಲ್ಲಿ ರಾಜಕೀಯ ಸಭೆ ಸೇರಿದ್ದಾಗ, ಜನರಲ್ ಮೈಕ್ ಒಡ್ವಾಯರನೆಂಬ ಬ್ರಿಟಿಷ್ ಅಧಿಕಾರಿಯ ಆಜ್ಞೆಯಿಂದ, ನಿಶ್ಶಸ್ತ್ರ ಜನರ ಮೇಲೆ ಗೋಳೀಬಾರು ಮೂಲಕ ಹತ್ಯಾಕಾಂಡ ನಡೆಯಿತು. ಇದರಿಂದ ಉದ್ವಿಗ್ನಗೊಂಡು, ಹಲವು ಹಿಂದೂ-ಮುಸ್ಲಿಮರು ಮಹಾತ್ಮಾಜಿ

ಯುವರ ಧುರೀಣತ್ವದಲ್ಲಿ ಸ್ವಾತಂತ್ರ್ಯ ಚಳವಳ ಸೇರಿದರು. ಹೇರಳ ಸಂಪಾದನೆಯಿರುವ ಲಾಯರ್‌ವೃತ್ತಿಯನ್ನು ಬಿಟ್ಟು ಮೋತಿಲಾಲರೂ ಜವಾಹರರೂ ಖಾದಿಧಾರಿಗಳಾಗಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುಂದಾಳಾದರು.

೧೯೨೧ರಲ್ಲಿ, ಇಂಗ್ಲೆಂಡಿನ ಯುವರಾಜರು ಹಿಂದೂದೇಶಕ್ಕೆ ಆಗಮಿಸುವ ಕಾಲಕ್ಕೆ ಹಲವರು ಕರಿಯಪತಾಕೆಗಳಿಂದ ಅವರಿಗೆ ನಿಷೇಧ ತೋರಿಸಲು ಯೋಚಿಸಿದ್ದರು. ಒಂದು ದಿನ ಜವಾಹರರು ತಮ್ಮ ಆಫೀಸಿನಲ್ಲಿ ಕೆಲಸದಲ್ಲಿ ಕುಳಿತಿದ್ದಾಗ, ಪೋಲೀಸರು ಬಂದು ಅವರ ದಸ್ತಗಿರಿಮಾಡಿದರು; ಮೋತಿಲಾಲರೂ ಇತರ ಮುಖಂಡರೂ ದಸ್ತಗಿರಿಗೊಳಗಾದರು. ಗಾಂಧಿಜಿಯವರನ್ನು ಅವರು ಮುಟ್ಟಲಿಲ್ಲ. ಜವಾಹರರಿಗೆ ಮೂರು ತಿಂಗಳ ಮತ್ತು ಮೋತಿಲಾಲರಿಗೆ ಆರು ತಿಂಗಳ ಶಿಕ್ಷೆ ವಿಧಿಸಲ್ಪಟ್ಟಿತು.

'ಚೌರೀ ಚೋರಾ'ದಲ್ಲಿ (ಸಂಯುಕ್ತ ಪ್ರಾಂತ) ಜನರು ದಂಗೆಗೆ ತೊಡಗಿದ ಕಾರಣ, ಗಾಂಧಿಜಿಯವರು ಚಳವಳವನ್ನು ಹಿಂದೆಗೆದರು. "ಸ್ವಾತಂತ್ರ್ಯಕ್ಕೆ ಬೆಚ್ಚಿನದು ಅಹಿಂಸೆ" ಎಂದರು ಗಾಂಧಿಜಿ.

ಕಾರಾಗ್ರಹದಿಂದ ಮರಳುತ್ತಲೇ ಜವಾಹರರು ತಿರುಗಿ ತಮ್ಮ ಕಾರ್ಯಾರಂಭಮಾಡಿದರು. ಸರಕಾರವು ತಿರಿಗಿ ಅವರನ್ನು ಹದಿನೆಂಟು ತಿಂಗಳ ಶಿಕ್ಷೆ ವಿಧಿಸಿ ಜೈಲಿಗೆ ಕಳಿಸಿತು. ಅವರು ಕಾರಾಗ್ರಹದಲ್ಲಿರುವಾಗ, ದಂಡ ವಿಧಿಸಿದ ಮೊಬಲಗಿನ ಬಗ್ಗೆ ಪೋಲೀಸರು 'ಆನಂದಭವನ'ಕ್ಕೆ ಹೋಗಿ, ಒಂದೊಂದೇ ವಸ್ತುವನ್ನು ಒಯ್ಯುತ್ತಿದ್ದರು. ೧೯೨೩ರಲ್ಲಿ ಜವಾಹರರು ಬಿಡುಗಡೆಹೊಂದಿದರು.

ಕೆಲಕಾಲಾನಂತರ, ಕಮಲಾ ನೆಹರುಗಳವರು ಅಸ್ವಸ್ಥರಿದ್ದಾಗ, ಪತ್ನಿ ಮತ್ತು ಪುತ್ರಿಯೊಂದಿಗೆ ಸ್ವಿಝರ್ಲೆಂದಿಗೆ ತೆರಳಿ, ಅಲ್ಲಿ ಒಂದು ವರ್ಷ ಕಾಲ ಉಳಿದು, ಮರಳಿದರು. ೧೯೨೭ರಲ್ಲಿ ರಷ್ಯದ ಸರಕಾರದ ಆಮಂತ್ರಣದಂತೆ ಅಲ್ಲಿಗೆ ತೆರಳಿ, ರಷ್ಯದ ಪ್ರಜಾಪ್ರಭುತ್ವದ ಹತ್ತನೇ ವಾರ್ಷಿಕೋತ್ಸವದಲ್ಲಿ ಭಾಗವಹಿಸಿದರು. ೧೯೨೯ರಲ್ಲಿ ಜಿನೇವದಲ್ಲಿ ಸಾಮ್ರಾಜ್ಯ ವಿರೋಧಿ ಪಕ್ಷದ ಅಧಿವೇಶನ ನಡೆದಾಗ ಅದರಲ್ಲಿ ಭಾಗವಹಿಸಿದರು. ಅದೇ ವರ್ಷ ಹಿಂದೂಸ್ಥಾನೀ ಸೇವಾದಳದ ಪ್ರಥಮಾಧಿವೇಶನದ ಅಧ್ಯಕ್ಷತೆ ವಹಿಸಿದರು. ೧೯೨೯ರಲ್ಲಿ, ಲಾಹೋರ್ ಕಾಂಗ್ರೆಸ್ ಅಧಿವೇಶನಕ್ಕೆ ಪ್ರಥಮ ಬಾರಿ, ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಜವಾಹರರ ಹೆಸರು ದೇಶದ ಮೂಲೆ ಮೂಲೆಗಳಿಗೂ ಹರಡಿತು.

ಅವರನ್ನು "ಭಾರತಭೂಷಣ"—"ತ್ಯಾಗಮೂರ್ತಿ" ಮುಂತಾಗಿ ಜನತೆ ಸಂಬೋಧಿಸಿತು. ಇದರಿಂದ ಅವರು ವಿನೋದಗೊಳ್ಳುತಿದ್ದರೇ ವಿನಾ ತಲೆಗೆಡಲಿಲ್ಲ.

ಸೆಖೆಗಾಲದಲ್ಲಿ ಪುಟ್ಟ ಇಂದಿರಾ, ತನ್ನ ತಾಯಿಯೊಂದಿಗೆ ಮುಸ್ಸೂರಿಗೆ ಹೋಗಿ ನಿಂತಾಗ, ಜವಾಹರರು ಬಾಲಕಿಯ ತಿಳುವಳಿಕೆ ಬಗ್ಗೆ, ಭೂಮಿ ಮತ್ತು ಅದರ ಪ್ರಗತಿಯ ಕಥೆಯನ್ನು ಪತ್ರಗಳ ರೂಪದಲ್ಲಿ ಕಳಿಸುತಿದ್ದರು. ಆ ಪತ್ರಗಳು ಚಲೋ ಗ್ರಂಥವಾಗಿ ಪ್ರಕಟವಾಗಿವೆ.

೧೯೩೦ರ ಸುಮಾರಿಗೆ ಮೋತಿಲಾಲ ನೆಹರುಗಳವರು ತಮ್ಮ ಭವ್ಯ ಗೃಹವನ್ನು ರಾಷ್ಟ್ರದ ಸೇವೆಗಾಗಿ ಕೊಂಗ್ರೆಸ್ಸಿಗೆ ಬಿಟ್ಟರು. ಅದನ್ನು "ಸ್ವರಾಜ್ಯ ಭವನ"ವೆಂದು ನಾಮಕರಣಮಾಡಲಾಯಿತು. ಬಳಿಯಲ್ಲೇ ಇನ್ನೊಂದು ಮನೆಕಟ್ಟಿಸಿ, ನೆಹರೂ ಕುಟುಂಬವು ಆ ಭವನಕ್ಕೆ ಬಂದು ವಾಸಿಸತೊಡಗಿತು.

೧೯೩೦ರಲ್ಲಿ ನೆಹರು ಕುಟುಂಬವಿಡೀ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿತು.

ಗಾಂಧಿಜಿಯವರೂ ಜವಾಹರರೂ ಬಂಧಿಸಲ್ಪಟ್ಟರು. (ಜವಾಹರರು, ಆಗ ತಮ್ಮ ಕಾರಾಗ್ರಹವಾಸದಲ್ಲಿ ಗಿಳಿಗಳೊಡನೆಯೂ ಅಳಿಲಿನೊಡನೆಯೂ ನಾಯಿಮರಿಗಳೊಡನೆಯೂ ಸ್ನೇಹಮಾಡಿಕೊಂಡು, ಆಡುತಿದ್ದ ಕಥೆಗಳು ಸ್ವಾರಸ್ಯವುಳ್ಳದಿವೆ.) ಆ ಕಾಲದಲ್ಲಿ ಮೋತಿಲಾಲರು ತಿರುಗಿ ದಸ್ತಗಿರಿ ಮಾಡಲ್ಪಟ್ಟು ಅದೇ ಕಾರಾಗ್ರಹಕ್ಕೆ ತರಲ್ಪಟ್ಟು, ಕೆಲಕಾಲದಲ್ಲೆ ಅಸ್ವಸ್ಥದ ದೆಸೆಯಿಂದ ಬಿಡುಗಡೆ ಮಾಡಲ್ಪಟ್ಟರು. ಕೆಲಕಾಲಾನಂತರ ಜವಾಹರ ಲಾಲರ ಕಾರಾಗ್ರಹ ಅವಧಿ ಮುಗಿದು ಬಿಡುಗಡೆಯಾಯಿತಾದರೂ, ಎಂಟೇ ದಿನಗಳಲ್ಲಿ ತಿರುಗಿ ಅವರನ್ನು ದಸ್ತಗಿರಿಮಾಡಿ ಜೈಲಿಗೊಯ್ದರು. ೧೯೩೧ರಲ್ಲಿ ಕಮಲಾ ನೆಹರುಗಳವರನ್ನು ಬಂಧಿಸಲಾಯಿತು. ಕಮಲಾ ನೆಹರುಗಳವರು ಜೈಲಿನಲ್ಲಿ ೨೬ ದಿನಗಳನ್ನು ಕಳೆಯುವುದರೊಳಗೆ, ಮೋತಿಲಾಲರ ಅಸ್ವಸ್ಥವು ಹೆಚ್ಚಿತೆಂಬ ಕಾರಣದಿಂದ ಜವಾಹರ ದಂಪತಿಗಳು ಬಿಡುಗಡೆ ಮಾಡಲ್ಪಟ್ಟರು. ಇದಾದ ಹನ್ನೊಂದು ದಿನಗಳಲ್ಲಿ ಮೋತಿಲಾಲರು, ಗಾಂಧಿಜಿಯವರೊಡನೆ, "ಮಹಾತ್ಮಾಜಿ, ನಾನು ಹೊರಡುವೆನು. ಸ್ವರಾಜ್ಯ ಲಭಿಸಿದುದನ್ನು ನೋಡಲು ನನ್ನಿಂದಾಗಲಿಲ್ಲ. ಆದರೆ, ನೀವು ಅದನ್ನು ಗೆದ್ದಿರುವಿರಿ— ಶೀಘ್ರದಲ್ಲೇ ಪಡೆಯುವಿರಿ ಎಂಬುದನ್ನು ಬಲ್ಲೆ" ಎನ್ನುತ್ತ ಇಹವನ್ನು ತೊರೆದರು.

ಜವಾಹರರು ದಿನರಾತ್ರಿ ದೇಶಕ್ಕಾಗಿ ಶ್ರಮಿಸಲಾರಂಭಿಸಿದರು. ೧೯೩೨ರಲ್ಲಿ ಕೊಂಗ್ರೆಸ್ಸು ತಿರಿಗಿ ಬೇಕಾಯಿದೆಶೀರ ಸಂಸ್ಥೆಯೆಂದು ಸಾರಲ್ಪಟ್ಟಿತು. ಅಲ್ಲಹಾಬಾದದಲ್ಲಿ, ಕಾನೂನನ್ನುಲ್ಲಂಘಿಸಿ ತೆಗೆದ ಮೆರವಣಿಗೆಯಲ್ಲಿ, ಜವಾಹರರ ಮಾತೆ ಸ್ವರೂಪರಾಣಿಯವರೂ ಇದ್ದರು; ಲಾಠಿ ಪ್ರಯೋಗವಾದಾಗ ಅವರಿಗೂ ಪೆಟ್ಟು ತಗಲಿತು. ಕಮಲಾ—ಶೀರ ಅಸ್ವಸ್ಥವಿದ್ದರು. ಆದರೂ, ಅತ್ತೆ-ಸೊಸೆ ಕೂಡಿ ಆಗಾಗ್ಗೆ ಕಾರಾಗ್ರಹಕ್ಕೆ ತೆರಳಿ ಜವಾಹರರನ್ನು ಮಾತಾಡಿಸಿ ಬರುತಿದ್ದರು. ಒಮ್ಮೆ ಜೈಲು ಅಧಿಕಾರಿಗಳು ಅವಮಾನಕರ ಮಾತುಗಳನ್ನಾಡಲು, ಜವಾಹರರು ತನ್ನ ಪತ್ನಿಗೆ ಮತ್ತು ಮಾತೃವಿಗೆ, ಅವರೊಡನೆ ವಿನಂತಿಸಿ ಇನ್ನು ಮುಂದೆ ಇಲ್ಲಿಗೆ ಬರಬೇಡಿರೆಂದು ಹೇಳಿದರು. ಕಾರಾಗ್ರಹದಲ್ಲಿ ಏಕಾಂತವಾಸವನ್ನು ಗ್ರಂಥ ವಾಚನದಿಂದ ಕಳೆದರು. ಜರ್ಮನ್ ಭಾಷೆಯನ್ನು ಕಲಿಯಲೂ ತೊಡಗಿದರು. ಸುಮಾರು ಒಂದೂವರೆ ವರ್ಷದ ಕಾರಾಗ್ರಹವಾಸದಿಂದ ಹೊರಗೆ ಬಂದ ಐದು ತಿಂಗಳು ಹದಿಮೂರು ದಿನಗಳಲ್ಲಿ ಸರಕಾರವು ತಿರಿಗಿ ಅವರನ್ನು ಬಂಧಿಸಿತು. ಕಮಲಾ ನೆಹರುಗಳವರ ಅಸ್ವಸ್ಥವು ವಿಷಮಾವಸ್ಥೆಗೆ ತಲಪಿತು. ಅವರನ್ನು ಕೆಲಕಾಲದಲ್ಲಿ ಜರ್ಮನಿಗೆ ಹವಾಬದಲಾವಣೆಗೂ ಚಿಕಿತ್ಸೆಗೂ ಕಳಿಸಲಾಯಿತು. ಜತೆಯಲ್ಲಿ ಇಂದಿರಾ ಹೋದಳು. ಜವಾಹರರು ಪುಸ್ತಕಗಳನ್ನೋದಿ, ದುಃಖವನ್ನು ಮರೆಯಲು ಯತ್ನಿಸಿದರು. ಜರ್ಮನಿಯಲ್ಲಿ ಕಮಲಾ ನೆಹರುಗಳವರ ಸ್ಥಿತಿ ಇನ್ನೂ ಕೆಟ್ಟಿತು. ಜವಾಹರರು ಬಿಡುಗಡೆಮಾಡಲ್ಪಟ್ಟು, ಜರ್ಮನಿಗೆ ತೆರಳಿದರು. ಕಮಲಾ, ತನ್ನ ಪ್ರಿಯ ಪತಿಯ ಸನ್ನಿಧಿಯಲ್ಲಿ (೧೯೩೬) ಪ್ರಾಣತ್ಯಾಗಮಾಡಿದಳು. ಜವಾಹರರು ವಿಧುರನಾಗಿ ಸ್ವದೇಶಕ್ಕೆ ಮರಳಿದರು. ಆ ವರ್ಷವೇ ತಿರಿಗಿ ಲಕ್ನೋ ಕೊಂಗ್ರೆಸ್ಸಿನ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಮುಂದಿನ ವರ್ಷ ಫೈಝ್‌ಪುರಿಯಲ್ಲೂ ಅವರೇ ಆರಿಸಲ್ಪಟ್ಟರು. ಅದೇ ವರ್ಷ (೧೯೩೭) ನಡೆದ ಮಹಾಚುನಾವಣೆಗಳಲ್ಲಿ ಜವಾಹರರು ದೇಶವ್ಯಾಪೀ ಸಂಚಾರ ಕೈಕೊಂಡು ಪ್ರಚಾರ ನಡೆಸಿದರು. ಇವರ ಫಲವಾಗಿ ಹಲವು ಕಡೆಗಳಲ್ಲಿ ಕೊಂಗ್ರೆಸ್ಸು ಗೆದ್ದಿತು. ಹನ್ನೊಂದು ಪ್ರಾಂತಗಳ ಪೈಕಿ ಏಳರಲ್ಲಿ ಕೊಂಗ್ರೆಸ್ ಸರಕಾರವು ಅಧಿಕಾರಕ್ಕೆ ಬಂತು.

೧೯೩೮ರಲ್ಲಿ ಜವಾಹರರಿಗೆ ಮಾತೃವಿಯೋಗವಾಯಿತು.

೧೯೩೭ರಿಂದಿತ್ತ ಜವಾಹರಲಾಲ ನೆಹರುಗಳವರ ಕಾರ್ಯಪ್ರಗತಿಯೂ ಯಶಸ್ಸೂ ಸುದೀರ್ಘ, ಮನೋಹರ ಚರಿತ್ರವೇ ಆಗಿರುತ್ತದೆ.

ಇಟಲಿ ಪ್ರವಾಸ ಕೈಕೊಂಡಾಗ, ಅಂದಿನ ಸರ್ವಾಧಿಕಾರಿ ಮುಸ್ಸೊಲಿನಿಯು ಜವಾಹರರ ಭೇಟಿಯನ್ನಿಚ್ಛಿಸಿದ್ದನು. ಅಬ್ಬಿಸೀನಿಯದ ಮೇಲೆ ಅನ್ಯಾಯವಾಗಿ ಯುದ್ಧ ಹೂಡಿದ ಇವನನ್ನು ಜವಾಹರರು ಕಾಣಲು ಮುಂದಾಗಲಿಲ್ಲ. ೧೯೩೮ರಲ್ಲಿ ಅವರು, ಸ್ಪೈಯಿನ್‌ನಲ್ಲಿ ಯುದ್ಧ ನಡೆದಿದ್ದಾಗ, ಆ ದೇಶವನ್ನು ಸಂದರ್ಶಿಸಿ, ಜನತೆಗೆ ಭಾರತದ ಸಹಾನುಭೂತಿಯ ಸಂದೇಶ ತಲುಪಿಸಿದರು. ಸಂಕಷ್ಟದಲ್ಲಿರುವವರಿಗೆ ಭಾರತದಿಂದ ಆಹಾರ ಸಹಾಯ ತಲುಪುವಂತೆ ಮಾಡಿದರು. ಸರ್ವಾಧಿಕಾರಿಗಳಿಗೆ ಬಗ್ಗಬಾರದೆಂದು ಲೋಕವನ್ನು ಎಚ್ಚರಿಸಿದರು. ಚೀನವನ್ನು ಸಂದರ್ಶಿಸಿ, ಭಾರತದ ಸ್ನೇಹ ಸಂದೇಶವನ್ನಿತ್ತರು. ಚೀನ—ಭಾರತಗಳ ಸಂಸ್ಕೃತಿ ಹಾಗು ಸಮಸ್ಯೆಗಳು ಏಕಪ್ರಕಾರವೆಂದರು. ಚಯಾಂಗ-ಕೈ-ಶೇಕ ದಂಪತಿಗಳನ್ನು ಭಾರತಕ್ಕೆ ಬರಮಾಡಿಸಿದರು.

ದ್ವಿತೀಯ ಮಹಾಯುದ್ಧವು ೧೯೩೯ನೇ ಸಪ್ಟಂಬರ ತಾ. ೨ರಲ್ಲಿ ಆರಂಭವಾಯಿತು. ಮುಂದೆ ಕೆಲಕಾಲದಲ್ಲಿ ಭಾರತವೂ ಈ ಯುದ್ಧದಲ್ಲಿ ಭಾಗಿಯೆಂದು ಬ್ರಿಟಿಷ್ ಸರಕಾರವು ಸಾರಿತು. ವೈಯಕ್ತಿಕ ಸತ್ಯಾಗ್ರಹವಾಯಿತು. 'ಭಾರತ ಸಂರಕ್ಷಣೆ'ಯ ಹೆಸರಿನ ಉಗ್ರ ಶಾಸನವು ಜ್ಯಾರಿಯಾಯಿತು. ೧೯೪೨ರಲ್ಲಿ, ಕ್ರಿಪ್ಸರ ಸಂಧಾನ ಯತ್ನ, ಅದರ ವಿಫಲತೆ, ೧೯೪೨ನೇ ಅಗೋಸ್ತು ತಾ. ೭ರಲ್ಲಿ ಮಹಾತ್ಮಾಜಿ ಮತ್ತು ಇತರ ಮುಖಂಡರ ಸಭೆ ಮತ್ತು ಆ ಸಭೆಯಲ್ಲಾದ "ಭಾರತದಿಂದ ತೊಲಗಿರಿ" ಎಂಬ ಠರಾವು, ತಾ. ೯ನೇ ಪ್ರಾತಃಕಾಲ ಎಲ್ಲ ಮುಖಂಡರ ದಸ್ತಗಿರಿ, ಅದರ ಫಲವಾಗಿ ದೇಶದಲ್ಲೆದ್ದ ದಂಗೆಗಳು ಮತ್ತು ಸಾವಿರಾರು ಜನರ ದಸ್ತಗಿರಿ, ಆಹುತಿ—ಇದೆಲ್ಲವೂ ಇಂದಿನ ಎಲ್ಲರ ಸ್ಮರಣೆಯಲ್ಲೂ ಇದೆ. (ದೇಶದಲ್ಲಿ ನಡೆದ ದಂಗೆಗಳ ಪ್ರಾಯಶ್ಚಿತ್ತವಾಗಿ ಮಹಾತ್ಮರ ೨೧ ದಿನಗಳ ಉಪವಾಸವೂ ನಡೆಯಿತು.) ಜವಾಹರರನ್ನು ಇತರ ಕೆಲವರೊಂದಿಗೆ ಅಹಮ್ಮದನಗರ ಕೋಟೆಯಲ್ಲಿ ಬಂಧಿಸಿದರು. ಕಾರಾಗ್ರಹದಲ್ಲಿ ಜವಾಹರರು, ಇತರ ಮುಖಂಡರ ಬಗ್ಗೆ ಚೀನೀ ಮಾದರಿಯ ಚಹಾ ತಯಾರಿಸುತ್ತಿದ್ದರು. ಅವರಿಗೆ ಅಡುಗೆಮಾಡಲು ಮಾತ್ರ ಬರುತ್ತಿದ್ದಿಲ್ಲ. ೧೯೪೫ರಲ್ಲಿ ಜವಾಹರರನ್ನು

ಅಲ್ಮೋರಕ್ಕೆ ಒಯ್ದರು. ಅದೇ ವರ್ಷ ಮಹಾಯುದ್ಧವು ಮುಗಿಯಿತು. (ಜೂನ್.) ನಮ್ಮ ಮುಖಂಡರ ಬಿಡುಗಡೆಯಾಗಿ, ಅವರನ್ನೂ ಮುಸ್ಲಿಂ ಲೀಗ್ ಮುಖಂಡರನ್ನೂ ಕರೆಸಿ, ಸಮಾಲೋಚನೆ ನಡೆಸಿ, ಮಧ್ಯವರ್ತಿ ಸರಕಾರ ರಚಿಸಲ್ಪಟ್ಟಿತು. ಯುದ್ಧಾನಂತರ ಇಂಗ್ಲೆಂಡಿನಲ್ಲಿ ನಡೆದ ಮಹಾಚುನಾವಣೆಗಳಲ್ಲಿ ಮಜೂರ ಪಕ್ಷವು ಅಧಿಕಾರಕ್ಕೆ ಬಂತು. ೧೯೪೭ನೇ ಆಗೋಸ್ತು ೧೫ರಂದು ಭಾರತಕ್ಕೆ ಸ್ವಾತಂತ್ರ್ಯ ಲಭಿಸಿತು. (ದೇಶವೂ ಇಬ್ಭಾಗವಾಯಿತು;) ಕೊನ್ಸ್ಟಿಟ್ಯೂವೆಂಟ್ ಎಸೆಂಬ್ಲಿ ರಚನೆಯಾಯಿತು. ಪ್ರಥಮ ಪ್ರಧಾನಮಾತ್ಯರಾಗಿ ಜವಾಹರರು ಆರಿಸಲ್ಪಟ್ಟರು. ೧೯೫೦ರಲ್ಲಿ ಭಾರತವು ಪ್ರಜಾಪ್ರಭುತ್ವವಾಗಿ ಸಾರಲ್ಪಟ್ಟಿತು. ೧೯೫೨ರಲ್ಲಿ ನಡೆದ ಮಹಾಚುನಾವಣೆಗಳಲ್ಲೂ ಕೊಂಗ್ರೆಸ್ಸೇ ಬಹುಮತ ಪಡೆದು, ಜವಾಹರರು ಎರಡನೇ ಬಾರಿಯೂ ಪ್ರಧಾನ ಸಚಿವರಾದರು.

ಪ್ರಧಾನಮಾತ್ಯರಾಗಿ ಜವಾಹರರು ಆಸ್ಯದ ಜನಾಂಗಗಳನ್ನೊಂದುಗೂಡಿಸುವ ಮಹಾ ಪರಿಷತ್ತು ಜರಗಿಸಿದರು. ಚೀನ–ಇಂಗ್ಲೆಂಡ್–ರಷ್ಯಗಳ ಪ್ರವಾಸ ಕೈಗೊಂಡರು. ಚೀನೀ ಮುಖಂಡರನ್ನು ಇಲ್ಲಿಗೆ ಆಹ್ವಾನಿಸಿದರು. ಇತ್ತೀಚೆಗೆ, ರಷ್ಯದ ಮಹಾ ಮುಖಂಡನ್ನು ಬರಮಾಡಿಸಿ, ಸ್ನೇಹ ಸಂವರ್ಧನೆಯನ್ನು ಸಾಧಿಸಿದರು. ಭಾರತವು ಯಾವ ಶಕ್ತಿಕೂಟಗಳೊಡನೆಯೂ ಸೇರುವುದಿಲ್ಲ—ಶಾಂತಿ ಸಾಧನೆ ಮತ್ತು ಶೋಷಣರಹಿತ ಸಮಾಜವ ರಚನೆಯೇ ಭಾರತದ ಧ್ಯೇಯವೆಂದು ಪದೇ ಪದೇ ಜಗತ್ತಿಗೆ ಸ್ಪಷ್ಟೀಕರಿಸುತ್ತಿರುವರು.

"ರಾಷ್ಟ್ರವು ಅವರ ಕೈಯಲ್ಲಿ ಸುರಕ್ಷಿತವಾಗಿದೆ" ಎಂದು ಗಾಂಧಿಜಿಯವರಂದಿದ್ದರು. ಅದು ಸದಾ ನಿಜ. "ಜವಾಹರರು ನನ್ನ ಉತ್ತರಾಧಿಕಾರಿಯಾಗಿರುವರು" ಎಂದೂ ಹೇಳಿದ್ದರು. ಅದೂ ನಿಜ. ಜನಕೋಟಿಯ ಪ್ರೇಮಾದರಗಳಿಗೆ ಪಾತ್ರರಾದ ಮುಖಂಡರಲ್ಲಿ ಇಂದು ಜವಾಹರರ ಸ್ಥಾನ ಹಿರಿದು.

ಜವಾಹರರು ದೀರ್ಘಾಯುವಾಗಲಿ!

ತಿಥಿ ವಿವರಣೆ.

ಪಂಡಿತ ಜವಾಹರಲಾಲ ನೆಹರೂರವರ
ಜೀವನದ 60 ವರ್ಷಗಳಲ್ಲಿ ನಡೆದ ಮುಖ್ಯ ಘಟನೆಗಳ ತಿಥಿಗಳು.

1889—(14ನೇ ನವಂಬರ್) ಜನ್ಮ, ಅಲಹಾಬಾದಿನಲ್ಲಿ.

1905—ಇಂಗ್ಲಂಡಿಗೆ ಪ್ರಯಾಣ.

1907—ಕೇಂಬ್ರಿಜ್‌ನ ಟ್ರಿನಿಟಿ ಕೋಲೇಜಿನಲ್ಲಿ ಪ್ರವೇಶ.

1910—ಪ್ರಕೃತಿ ವಿಜ್ಞಾನ ಪರೀಕ್ಷೆಯಲ್ಲಿ ಉತ್ತಮ ದರ್ಜೆಯಲ್ಲಿ ಉತ್ತೀರ್ಣರಾದರು.

1912—ವಕೀಲಿ ಪರೀಕ್ಷೆಯಲ್ಲಿ ಪಾಸಾಗಿ ಭಾರತಕ್ಕೆ ಪುನರಾಗಮನ.

1916—ಲಕ್ನೋ ಕೊಂಗ್ರೆಸ್ ಅಧಿವೇಶನದಲ್ಲಿ ಮೊದಲ ಬಾರಿಗೆ ಗಾಂಧಿಜಿಯವರ ಭೇಟಿ.

—ಕುಮಾರಿ ಕಮಲಾ ಕೌಲರೊಡನೆ ವಿವಾಹ.

1918—ಅ. ಭಾ. ಕೊಂಗ್ರೆಸ್ ಕಮಿಟಿಯ ಸದಸ್ಯರಾದರು.

1922—(ಮೇ) ಯುವರಾಜ ಎಡ್ವರ್ಡನ ಭಾರತ ಯಾತ್ರೆಯ ಸಮಯದಲ್ಲಿ ಮೊದಲನೆಯ ಬಾರಿ ಬಂಧನ.

—(ಆಗಸ್ಟ) ಬಂಧವಿಮೋಚನೆ.

—(ಅಕ್ಟೋಬರ್) ವಿದೇಶೀ ವಸ್ತ್ರ ಬಹಿಷ್ಕಾರದ ಚಳವಳದ ಸಂಬಂಧವಾಗಿ ಎರಡನೆಯ ಬಾರಿ ಬಂಧನ.

1923—(ಜನವರಿ) ಬಿಡುಗಡೆ.

—ಅ. ಭಾ. ಕೊಂ. ಕಮಿಟಿಯ ಮಂತ್ರಿಯಾಗಿ ಆಯ್ಕೆ.

—ನಾಭಾದಲ್ಲಿ ಶಾಸನೋಲ್ಲಂಘನೆಗಾಗಿ ಬಂಧನ.

—ನಾಭಾ ಜೈಲಿನ ಕಷ್ಟಗಳ ಕಾರಣದಿಂದಾಗಿ ವಿಷಮಶೀತಜ್ವರದಿಂದ ಪೀಡಿತರಾದರು.

1926—ಜವಾಹರಲಾಲರ ಪ್ರೇರಣೆಯಿಂದ ಯುಕ್ತಪ್ರಾಂತೀಯ ಕೊಂಗ್ರೆಸ್ ಕಮಿಟಿಯ ಮೂಲಕ ಸಮಾಜವಾದೀ ಪ್ರವೃತಿಯ ಕಾರ್ಯಕ್ರಮ ನಿರ್ಧರಿಸಲ್ಪಟ್ಟಿತು.

1926-27—ಕೊಂಗ್ರೆಸ್ಸಿನ ಪ್ರತಿನಿಧಿಯಾಗಿ ಬ್ರುಸೆಲ್ಸ್‌ನ ಸಾಮ್ರಾಜ್ಯವಾದ ವಿರೋಧಿ ಸಮ್ಮೇಳನದಲ್ಲಿ ಭಾಗವಹಿಸುವಿಕೆ; ಹಾಗೂ ಇಟಲಿ,

ಸ್ವಿಜರ್‌ಲೇಂಡ್, ಇಂಗ್ಲೆಂಡ್, ಬೆಲ್ಜಿಯಮ್, ಜರ್ಮನಿ ಮತ್ತು ರಸ್ಯದ ಸಂದರ್ಶನ.

1927—(ನವಂಬರ್) ರಸ್ಯದ ಕ್ರಾಂತಿಯ ಹತ್ತನೇ ವಾರ್ಷಿಕ ಸಮ್ಮೇಲನದಲ್ಲಿ ಭಾಗವಹಿಸಲು ಮೋಸ್ಕೊ ಪ್ರಯಾಣ.

—(ಡಿಸೆಂಬರ್) ಮದ್ರಾಸ್ ಕೊಂಗ್ರೆಸಿನಲ್ಲಿ ಸ್ವಾಧೀನತೆ, ಯುದ್ಧ ಸಂಕಟ ಮತ್ತು ಸಾಮ್ರಾಜ್ಯವಾದ ವಿರೋಧೀ ಸಂಘದೊಡನೆ ಸಹಯೋಗದ ಪ್ರಸ್ತಾವಗಳ ಸಮರ್ಥನೆ ಮತ್ತು ಸ್ವೀಕಾರ.

—(ಡಿಸೆಂಬರ್) ಅ. ಭಾ. ಕೊಂ. ಕಮಿಟಿಯ ಮಂತ್ರಿಪದವಿಯ ಗ್ರಹಣ.

1929—ಅ. ಭಾ. ಕೊಂ. ಕಮಿಟಿಯಲ್ಲಿ ಯುಕ್ತ ಪ್ರಾಂತೀಯ ಕೊಂಗ್ರೆಸ್ ಕಮಿಟಿಯ ಸಮಾಜವಾದೀ ಕಾರ್ಯಕ್ರಮದ ಸಮರ್ಥನೆ ಮತ್ತು ಸ್ವೀಕಾರ.

—ಕೊಂಗ್ರೆಸ್ಸಿನ ಅಧ್ಯಕ್ಷರೆಂದು ಸಾರಲ್ಪಟ್ಟರು.

—"Letters From a Father to His Daughter" (ಮಗಳಿಗೆ ತಂದೆಯ ಪತ್ರಗಳು) ಇದರ ಪ್ರಕಟಣೆ.

—(ಡಿಸೆಂಬರ್) ಸ್ವಾಧೀನತೆಯ ಪ್ರಸ್ತಾವದ ಅನುಮೋದನೆ ಮತ್ತು ಲಾಹೋರ ಕೊಂಗ್ರೆಸ್ಸಿನ ಮೂಲಕ ಅದರ ಸ್ವೀಕಾರ.

1930—(14ನೇ ಎಪ್ರಿಲ್) ಉಪ್ಪಿನ ಸತ್ಯಾಗ್ರಹಕ್ಕಾಗಿ ನಾಲ್ಕನೆಯ ಬಾರಿ ಬಂಧನ ಮತ್ತು 6 ತಿಂಗಳ ಶಿಕ್ಷೆ.

—(14 ಅಕ್ಟೋಬರ್) ಬಿಡುಗಡೆ.

—(ಅಕ್ಟೋಬರ್) ಅಲಹಾಬಾದಿನಲ್ಲಿ ರೈತರ ಸಮ್ಮೇಳನದಲ್ಲಿ ಭಾಗವಹಿಸಿದುದಕ್ಕಾಗಿ ಐದನೇ ಬಾರಿ ಬಂಧನ.

1931—(26ನೇ ಜನವರಿ) ಬಿಡುಗಡೆ.

—(ಫೆಬ್ರವರಿ) ಪಂಡಿತ ಮೋತೀಲಾಲ ನೆಹರೂರವರ ನಿಧನ.

—ಕರಾಚಿ ಕೊಂಗ್ರೆಸ್ಸಿಗಾಗಿ ಅರ್ಥಿಕನೀತಿಯ ಮಸೂದೆಯನ್ನು ತಯಾರಿಸಿದರು.

—(26ನೇ ಡಿಸೆಂಬರ್) ಯುಕ್ತಪ್ರಾಂತದ ರೈತ ವಿದ್ರೋಹದ ಆಂದೋಲನದಲ್ಲಿ ಆರನೇ ಬಾರಿ ಬಂಧನ ಮತ್ತು ಎರಡು ವರ್ಷದ ಸಜೆ.

1933 —(30ನೇ ಆಗಸ್ಟ) ತಾಯಿಯ ಅನಾರೋಗ್ಯದ ಕಾರಣದಿಂದಾಗಿ ಜೈಲಿನಿಂದ ಬಿಡುಗಡೆ.

1934 —(ಜನವರಿ) ಬಿಹಾರದ ಭೂಕಂಪ ಪೀಡಿತರ ಸಹಾಯಕ್ಕಾಗಿ ಸಂಚಾರ ಮತ್ತು ಸಂಘಟನೆ.

—(16ನೇ ಫೆಬ್ರವರಿ) ಕಲ್ಕತ್ತೆಯಲ್ಲಿ ಕೊಟ್ಟ ಭಾಷಣಕ್ಕಾಗಿ ಏಳನೇ ಬಾರಿ ಬಂಧನ ಮತ್ತು ಎರಡು ವರ್ಷಗಳ ಸಜೆ.

—"Glimpses of World History" (ವಿಶ್ವ ಇತಿಹಾಸದ ನೋಟಗಳು) ಎಂಬ ಗ್ರಂಥದ ಪ್ರಕಾಶನ.

(11ನೇ ಆಗಸ್ಟ) ಪತ್ನಿಯ ಅನಾರೋಗ್ಯದ ಕಾರಣದಿಂದಾಗಿ 11 ದಿನಗಳ ವಾಗ್ಬದ್ಧ ಬಿಡುಗಡೆ.

1935 —(4 ಸೆಪ್ಟೆಂಬರ) ಪತ್ನಿಯ ಅಸ್ವಸ್ಥದ ದೆಸೆಯಿಂದ ಬಿಡುಗಡೆ.

1936 —(25ನೇ ಫೆಬ್ರವರಿ) ಕಮಲಾ ನೆಹರೂರವರ ನಿಧನ.

—(ಎಪ್ರಿಲ್) "ಆತ್ಮಕಥೆ"ಯ ಪ್ರಕಾಶನ.

—(ಡಿಸೆಂಬರ್) ಎರಡನೇ ಬಾರಿ ಕೊಂಗ್ರೆಸ್ಸಿನ ಅಧ್ಯಕ್ಷ ಪದವಿಯನ್ನು ಅಲಂಕರಿಸಿದರು.

1937 — ಪುನಃ ಕೊಂಗ್ರೆಸ್ಸಿನ ಅಧ್ಯಕ್ಷರಾದರು.

1938 —(ಜುಲೈ) ಗೃಹಯುದ್ಧ ಪೀಡಿತ ಸ್ಪೈಯಿನ್‌ದ ಯಾತ್ರೆ ಮತ್ತು ಅಲ್ಲಿಯ ಪ್ರಜಾತಂತ್ರವಾದೀ ಮುಖಂಡರ ಭೇಟಿ.

1939 — ಸಿಂಹಳಯಾತ್ರೆ.

— ಚೀನಾಯಾತ್ರೆ.

1940 — ವೈಯಕ್ತಿಕ ಸತ್ಯಾಗ್ರಹದ ಅಂದೋಲನದಿಂದಾಗಿ ಎಂಟನೇ ಬಾರಿ ಬಂಧನ.

1941 — ಬಿಡುಗಡೆ.

1942 —(ಆಗಸ್ಟ) ಅ. ಭಾ. ಕೊಂ. ಸಮಿತಿಯ ಮುಂಬಯಿ ಅಧಿವೇಶನದಲ್ಲಿ 'ಭಾರತದಿಂದ ತೊಲಗಿರಿ' ಎಂಬ ಪ್ರಸ್ತಾಪದಿಂದಾಗಿ ಒಂಭತ್ತನೇ ಬಾರಿ ಬಂಧನ.

1945 —(ಜೂನ್) ಬಿಡುಗಡೆ.

— ಅಜಾದ್ ಹಿಂದ್ ಮೊಕದ್ದಮೆಗಾಗಿ ಡಿಫೆನ್ಸ್ ಕೌನ್ಸಿಲ್ ಸಂಘಟನ.

1946—(ಮಾರ್ಚ್) "Discovery of India" (ಭಾರತದ ಸಂಶೋಧನೆ) ಎಂಬ ಗ್ರಂಥದ ಪ್ರಕಾಶನ.

—(ಜುಲೈ) ನಾಲ್ಕನೇ ಬಾರಿ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಚುನಾಯಿತರಾದರು.

—(ಸೆಪ್ಟೆಂಬರ್) ನಡುಗಾಲ ಸರಕಾರದಲ್ಲಿ ವಿದೇಶ ಮಂತ್ರಿಯಾಗಿ ಪ್ರವೇಶಮಾಡಿ ಮತ್ತು Executive Councilನ ಉಪಾಧ್ಯಕ್ಷರಾಗಿ ನೇಮಿತರಾದರು.

1947—(ಮಾರ್ಚ್) ಢಿಲ್ಲಿಯಲ್ಲಿ ಅಖಿಲ ಏಷ್ಯ ಸಮ್ಮೇಳನದ ಸಂಯೋಜನೆ ಮತ್ತು ಅದರ ಕಾರ್ಯಕ್ರಮದಲ್ಲಿ ಪ್ರಮುಖ ಭಾಗ.

—(15ನೇ ಆಗಸ್ಟ್) ಭಾರತದ ಪ್ರಧಾನ ಮಂತ್ರಿಯಾದರು.

1948—(ಜೂನ್) ಉದಯಮಂಡಲದ "ಸಂಯುಕ್ತ ರಾಷ್ಟ್ರಗಳ ಏಷ್ಯ ಮತ್ತು ದೂರಪೂರ್ವದ ಆರ್ಥಿಕ ಕಮಿಶನ್"ನ ತೃತೀಯ ಅಧಿವೇಶನದ ಉದ್ಘಾಟನೆ.

—(ಅಕ್ಟೋಬರ್) ಲಂಡನಿನಲ್ಲಿ ಕೊಮನ್‌ವೆಲ್ತ್ ಸಮ್ಮೇಳನದಲ್ಲಿ ಭಾಗವಹಿಸುವಿಕೆ ಮತ್ತು ಭಾರತವು ಕೊಮನ್‌ವೆಲ್ತ್‌ನ ಒಳಪಟ್ಟಿದೆಯೆಂಬ ಘೋಷಣೆ.

1949—(ಅಕ್ಟೋಬರ್) ಅಮೇರಿಕಾ ಪ್ರವಾಸ.

—(„) ಅಮೇರಿಕೆಯ ಶಾಸನಸಭೆಯ ಅಧಿವೇಶನದಲ್ಲಿ ಭಾಷಣ ಮತ್ತು ಭಾರತದ ಪರವಾಗಿ ವಿಶ್ವದಲ್ಲಿ "ಸ್ವಾಧೀನತೆ, ನ್ಯಾಯ ಮತ್ತು ಶಾಂತಿ"ಯ ಸೇವೆಯ ಪ್ರತಿಜ್ಞೆ.

—(ಅಕ್ಟೋಬರ್) ಸಂಯುಕ್ತರಾಷ್ಟ್ರಗಳ "ಟ್ರಸ್ಟೀ ಶಿಪ್ ಕೌನ್ಸಿಲ್"ನಲ್ಲಿ ಭಾಷಣ.

—(ಅಕ್ಟೋಬರ್) ಕೆನಡದ ಪಾರ್ಲಿಮೆಂಟನಲ್ಲಿ ಭಾಷಣ ಮತ್ತು ಭಾರತದ ಪರವಾಗಿ ಕೊಮನ್‌ವೆಲ್ತ್‌ನೊಡನೆ ಸಹಯೋಗದ ಆಶ್ವಾಸನೆ.

1950—(ಜನವರಿ 26) ಭಾರತವು ಗಣರಾಜ್ಯವಾಯಿತು.

1952—ಎರಡನೇ ಬಾರಿ ಭಾರತದ ಪ್ರಧಾನಾಮಾತ್ಯರಾದರು.

1953—ಚೀನಾ ಪ್ರವಾಸ.

1955—ರಷ್ಯಾ ಪ್ರವಾಸ.

▪▪▪▪▪▪▪▪

ಪ್ರತಿ ವಾರವೂ ಕೊಂಡುಕೊಳ್ಳಿರಿ!

"ಒಂದಾಣೆ ಮಾಲೆ"ಯ ಪುಸ್ತಕಗಳು, ಪ್ರತಿ ವಾರ ಪ್ರಕಟವಾಗುತ್ತಿವೆ. ಹೊಸ ಹೊಸ ವಿಷಯಗಳ ಮೇಲೆ ಪುಸ್ತಕಗಳು ಹೊರಡುತ್ತಿವೆ. 1954ನೇ ಸಪ್ಟಂಬರದಿಂದ 1956ನೇ ಜುಲೈ ತಿಂಗಳ ಮೊದಲನೇ ವಾರದ ವರೆಗೆ 95 ಪುಸ್ತಕಗಳು ಪ್ರಕಟವಾಗಿದ್ದು, ಇನ್ನೂ ಪ್ರತಿ ವಾರ ಒಂದೊಂದು ಹೊಸ ಪುಸ್ತಕ ಹೊರಡುತ್ತಲೇ ಇದೆ.

95 ಆಣೆಗಳಿಗೆ 'ಒಂದಾಣೆ ಮಾಲೆ'ಯು, ಹೊದಿಕೆ ಕೂಡಿ, ಒಟ್ಟು 2036 ಪುಟಗಳನ್ನು ಕೊಟ್ಟಿರುತ್ತದೆ. ಇಷ್ಟು ಮೊಬಲಗಿಗೆ ಇಷ್ಟು ಪುಟಗಳನ್ನು ಬೇರೆ ಎಲ್ಲಿಯೂ ಯಾವ ಪ್ರಕಟಣೆಯೂ ಕೊಟ್ಟಿಲ್ಲ.

ವಿದ್ವಾಂಸರು ಮಾತ್ರ 'ಒಂದಾಣೆಮಾಲೆ'ಗೆ ಬರೆಯುತ್ತಾರೆ. 'ಅಶ್ಲೀಲ' ಎಂಬ ಅಂಶವೇ ಒಂದಾಣೆಮಾಲೆ'ಯ ಪ್ರಕಟಣೆಗಳಲ್ಲಿರುವುದಿಲ್ಲ.

'ಒಂದಾಣೆಮಾಲೆ' ಪುಸ್ತಕಗಳು ಚಿಕ್ಕ ವಿದ್ಯಾರ್ಥಿಗಳಿಂದ ವಯೋವೃದ್ಧರ ವರೆಗೆ, ಪ್ರತಿಯೊಬ್ಬನಿಗೂ ಅವಶ್ಯ ಇವೆ. ಇಷ್ಟು ಸುಲಭ ಬೆಲೆಯಲ್ಲಿ ಇಷ್ಟು ಉತ್ತಮ ಸಾಹಿತ್ಯವು, ಈ ಮೊದಲು ಎಲ್ಲಿಯೂ ಒದಗಿಸಲ್ಪಟ್ಟಿಲ್ಲ.

'ಒಂದಾಣೆ ಮಾಲೆ' ಪುಸ್ತಕಗಳನ್ನು ಟಪ್ಪಾಲು ದ್ವಾರಾ ತರಿಸಿಕೊಳ್ಳುವವರು ರೂ. 4—8—0ನ್ನು ಮನಿಯಾರ್ಡರ್ ಮೂಲಕ ಕಳಿಸತಕ್ಕದ್ದು. ಡಿಪಾಜಿಟ್ ಇಡುವವರು ಮಾತ್ರ ಏಜನ್ಸಿಗಾಗಿ ಬರೆದುಕೊಳ್ಳತಕ್ಕದ್ದು.

ವಾರಕ್ಕೆ ಕೇವಲ ಒಂದಾಣೆ ವ್ಯಯದಿಂದ ಒಂದು ಉತ್ಕೃಷ್ಟ—ಉಪಯುಕ್ತ ಪುಸ್ತಕವನ್ನು ಹೊಂದುವ ಈ ಯೋಜನೆಯ ಸದುಪಯೋಗ ಮಾಡಿಕೊಳ್ಳಿರಿ.

ಈ ವರೆಗೆ ಪ್ರಕಟವಾದ ಪುಸ್ತಕಗಳ ಹೆಸರುಗಳನ್ನು ಈ ಪುಸ್ತಕದ ಹೊದಿಕೆಯ ಎರಡನೇ ಪುಟದಲ್ಲಿ ನೋಡಿರಿ.

ಒಂದಾಣೆ ಮಾಲೆ, ಪ್ರಭಾತ ಆಫೀಸು, ರಥಬೀದಿ,
ಮಂಗಳೂರು-1.

ANNA PUBLICATIONS, CAR STREET, MANGALORE-1.

Edited, Printed & Published by K. V. Shenoy
at The Prabhat Printers, Ltd., Mangalore.